ಅಚಲ

ಜೂನ್ 2000

ತಿಂಗಳ ಪತ್ರಿಕೆ

ಒಳಗೇನಿದೆ ?

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ

ಸಂಪುಟ - 14 ಸಂಚಿಕೆ - 6

ಪ್ರಕಾಶಕರು

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು.

ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by Dr. N. Gayathri

Published by Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೇ,

ಕಳೆದ 14 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ.ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ. ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ವಿವರಗಳು ಹೀಗಿವೆ :

ವಾರ್ಷಿಕ ಚಂದಾ : ರೂ. 40/- (ವ್ಯಕ್ತಿಗಳಿಗೆ)
ರೂ. 75/- (ಸಂಸ್ಥೆಗಳಿಗೆ)
ಆಜೀವ ಚಂದಾ : ರೂ. 300/- (ವ್ಯಕ್ತಿಗಳಿಗೆ)
ರೂ. 400/- (ಸಂಸ್ಥೆಗಳಿಗೆ)

ಗಮನಿಸಿ

ಅಚಲ ವಿಳಾಸ ಬದಲಾಗಿದೆ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ವಿಶ್ವಸಂಸ್ಥೆ ಮತ್ತು ಮಹಿಳೆ

ಬೀಜಿಂಗ್ ಸಮ್ಮೇಳನ ಮುಗಿದು ಐದು ವರ್ಷಗಳ ಅಂತ್ಯದಲ್ಲಿ ನ್ಯೂಯಾರ್ಕ್‌ನಲ್ಲಿ ವಿಶ್ವಸಂಸ್ಥೆಯ ಕಛೇರಿಯ ಆವರಣದಲ್ಲೇ ನಡೆದ ಜಾಗತಿಕ ಮಹಿಳಾ ಸಭೆ ಮಹಿಳೆಯರಿಗಾಗಿ ನಡೆಸಿದ ಕಾರ್ಯಕಲಾಪಗಳು ಮಹಿಳಾ ಚಳುವಳಿಯ ಹಾದಿಗೆ ಏನನ್ನು ಸೇರಿಸಿತು ಎಂದಾಗ ಉತ್ತರ ತೃಪ್ತಿದಾಯಕವಲ್ಲದಾದರೂ, ಹಲವಾದರೂ ' ಮಹಿಳಾ ಪ್ರಶ್ನೆಗಳನ್ನು ಮತ್ತೆ ಮತ್ತೆ ಪುನರ್ ಪರಿಶೀಲಿಸುವ ಕಾರ್ಯವಾದದ್ದು ನಿಜ. ಐದು ದಿನಗಳ ಈ ಸಭೆಯಲ್ಲಿ ಚರ್ಚೆ ತರ್ಕಗಳ ನಂತರ ವಿವಿಧ ದೇಶಗಳು ಮಂಡಿಸಿದ ವರಧಿಯನ್ನಾಧರಿಸಿ ರೂಪಿತವಾದ ದಸ್ತಾವೇಜು ಅಂತೂ ಮಹಿಳೆಯರ ತುರ್ತು ಪ್ರಶ್ನೆಗಳನ್ನು ಗಮನಿಸಿದೆ. 1995ರಲ್ಲಿ ಬೀಜಿಂಗ್ ಮಹಿಳಾ ಸಮಾವೇಶದಲ್ಲಿ ಯೋಜಿಸಿದ ಕಾರ್ಯಕ್ರಮಗಳು ಎಷ್ಟರ ಮಟ್ಟಿಗೆ ಕಾರ್ಯಗತವಾಗಿವೆಯೆಂಬುದನ್ನು ಪರಿಗಣಿಸುವುದೂ ಈ ಸಭೆಯ ಮುಖ್ಯ ಉದ್ದೇಶವಾಗಿತ್ತು.

ಐದು ದಿನಗಳ ಅವಿಶ್ರಾಂತ ಚರ್ಚೆ, ವಾಗ್ಯುದ್ಧಗಳ ನಂತರ ರಚಿತವಾದ ದಸ್ತಾವೇಜಿನ ಫಲಶ್ರುತಿಯೆಂದರೆ ಬೀಜಿಂಗ್ ಸಮ್ಮೇಳನದಲ್ಲಿ ಕೆಲವು ಸರ್ಕಾರಗಳು ಒಪ್ಪಿಕೊಂಡ ನಿರ್ಣಯಗಳು ಈ ಸಭೆಯಲ್ಲಿ ಇನ್ನೂ ಹೆಚ್ಚಿನ ರಾಜಕೀಯ ಸಂಕಲ್ಪದಿಂದ ಅಂಗೀಕಾರವಾಗಬೇಕಿತ್ತೆಂಬ ಅಂಶವನ್ನು ಸ್ಪಷ್ಟಪಡಿಸಿತು. ಆದರೂ ಅಂತಿಮ ದಸ್ತಾವೇಜು ನೇತ್ಯಾತ್ಮಕ ನಿಲುವನ್ನೇನೂ ಹೊಂದಿಲ್ಲ. ಹೆಚ್ಚಿನ ಸಾಧನೆಯನ್ನೇನೂ ಈ ಸಭೆ ಗಳಿಸಿತೆನ್ನಲಾಗದಿದ್ದರೂ ಐದು ವರ್ಷಗಳ ಹಿಂದೆ ಬೀಜಿಂಗ್‌ನಲ್ಲಿ ಮಾಡಿಕೊಂಡ ಒಪ್ಪಂದಗಳನ್ನು ಮತ್ತೊಮ್ಮೆ ಭದ್ರಪಡಿಸಲಾಯಿತು.

ಕೆಲವೊಂದು ವಿಷಯಗಳಲ್ಲಿ ಹಿಂದಿನ ನಿರ್ಣಯಗಳನ್ನು ದಾಟಿ ಮಹಿಳೆಯರ ಆರೋಗ್ಯ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳಿಗೆ ಸಂಬಂಧಪಟ್ಟಂತೆ ಕೆಲವೊಂದು ನಿರ್ಧಾರಗಳನ್ನು ತೆಗೆದುಕೊಳ್ಳಲಾಯಿತು. ಬೀಜಿಂಗ್‌ನಲ್ಲಿ ಅಷ್ಟಾಗಿ ಗಮನ ಕೊಡದ ತಾಯಿಯ ಆರೋಗ್ಯ ಈ ಸಭೆಯಲ್ಲಿ ಆರೋಗ್ಯ ಕ್ಷೇತ್ರದ ಮುಖ್ಯ ವಿಷಯವಾಯಿತು. ಜಾಗತೀಕರಣದ ದುಷ್ಪರಿಣಾಮ ಮತ್ತು ಮಹಿಳೆಯರ ಮೇಲೆ ಉಂಟುಮಾಡುತ್ತಿರುವ ಹಾವಳಿಯನ್ನು ಈ ದಸ್ತಾವೇಜು ಒಪ್ಪುತ್ತದೆ. ಮಹಿಳೆಯರ ಆಸ್ತಿಯನ್ನು ಹೊಂದುವ ಹಕ್ಕು ಮತ್ತು ಪಿತ್ರಾರ್ಜಿತ ಹಕ್ಕು ಇವುಗಳನ್ನು ಕುರಿತಂತೆ ಹಿಂದೆ ಭಿನ್ನಭಿಪ್ರಾಯವಿದ್ದದ್ದು ಈ ಸಭೆಯಲ್ಲಿ ಒಮ್ಮತಕ್ಕೆ ಬರಲಾಯಿತು. ಸರ್ಕಾರಗಳು ಆಯವ್ಯಯವನ್ನು ರೂಪಿಸುವಾಗ ಅದಕ್ಕೆ ಸ್ತ್ರೀವಾದಿ ದೃಷ್ಟಿಕೋನದ ಅಗತ್ಯವಿದೆಯೆಂಬುದನ್ನೂ ಚರ್ಚಿಸಲಾಯಿತು. ದಕ್ಷಿಣ ಆಫ್ರಿಕಾದಲ್ಲಿ ಇಂತಹ ಪ್ರಕ್ರಿಯೆಯೊಂದು ಈಗಾಗಲೇ ಆರಂಭವಾಗಿದೆಯೆಂದು ಗುರುತಿಸಲಾಯಿತು. ಆ ದೇಶದ ಸರ್ಕಾರವು ಪ್ರತಿಯೊಂದು ಆಯವ್ಯಯದ ಹಂಚಿಕೆಯನ್ನು ಮಾಡುವಾಗಲೂ ಆದರಿಂದ ಮಹಿಳಯರಿಗೆ ಹೇಗೆ ಅನುಕೂಲವಾಗಬಲ್ಲದು ಎಂಬುದನ್ನು ಕುರಿತಂತೆ ಚಿಂತಿಸುತ್ತದೆ.

ಈಗ ನಡೆದ ಮಹಿಳಾ ಸಭೆಯ ಪ್ರಾಮುಖ್ಯತೆಯೆಂದರೆ ಬೀಜಿಂಗ್ ಸಮ್ಮೇಳನದಲ್ಲಿ ಸರ್ಕಾರಗಳು ತೆಗೆದುಕೊಂಡ ನಿರ್ಧಾರಗಳನ್ನು ಮತ್ತೊಮ್ಮೆ ಬದ್ಧವಾಗುವ ಮತ್ತು ಆ ದಿಕ್ಕಿನಲ್ಲಿ ಕ್ರಿಯಾಶೀಲವಾಗುವ ನಿರ್ಧಾರ ಕೈಗೊಂಡವು, ಅದರಲ್ಲಿ ಮುಖ್ಯವಾದದ್ದು ಶಾಸನ ಸಭೆಗಳಲ್ಲಿ ಮತ್ತು ರಾಜಕೀಯ ಪಕ್ಷಗಳಲ್ಲಿ ಪ್ರಜ್ಞಾಪೂರ್ವಕವಾಗಿ ಮಹಿಳೆಯರ ಸಂಖ್ಯೆಯನ್ನು ಹೆಚ್ಚಿಸುವ ಹಾಗೂ ಅವರ ರಾಜಕೀಯ ಕ್ರಿಯಾಶೀಲತೆಗೆ ಹೆಚ್ಚು ಒತ್ತು ಕೊಡುವ ಅಂಶವನ್ನು ಈ ಸಭೆ ಗಂಭೀರವಾಗಿ ಚಿಂತಿಸಿತಾದರೂ ಆ ದಿಕ್ಕಿನಲ್ಲಿ ಸಮಯಬದ್ಧ ಕಾರ್ಯಕ್ರಮವನ್ನು ಹಾಕಿಕೊಳ್ಳದಿದ್ದುದು ಕೂಡ ಮಹಿಳಾ ಹೋರಾಟಗಾರ್ತಿಯಲ್ಲಿ ಹೊಗೆಯನ್ನು ಉಂಟು ಮಾಡಿತು.

ಇಂತಹ ಹಲವಾರು ವಿಶ್ವ ಸಂಸ್ಥೆ ಸಭೆಗಳಲ್ಲಿ ಭಾಗವಹಿಸಿರುವ ಭಾರತದ ಗೀತಾ ಸೇನ್ ಹೇಳುವಂತೆ, ಈ ಸಭೆ ಸಮಾವೇಶಗಳು ಹೆಚ್ಚಿನದೇನನ್ನು ಸಾಧಿಸದಿದ್ದರೂ ಮಹಿಳಾ ಪ್ರಶ್ನೆಗಿರುವ ರಾಜಕೀಯ ಆಯಾಮವನ್ನು ರಾಜಕೀಯ ವ್ಯಾಖ್ಯಾನವನ್ನು ಹೆಚ್ಚು ಸ್ಪಷ್ಟಪಡಿಸುತ್ತದೆ. ಇಡೀ ವಿಶ್ವವೇ ಜಾಗತೀಕರಣಕ್ಕೆ ಒಳಗಾಗಿರುವಾಗ ಮಹಿಳೆಯರೂ ಜಾಗತಿಕ ನೆಲೆಯಲ್ಲಿ ಸಂಘಟಿತರಾಗಬೇಕಾದ್ದು ಅತ್ಯಂತ ಅಗತ್ಯವಾಗಿದೆ, ಸ್ಥಳೀಯ ನೆಲೆಯ ಸಂಘಟನೆಯಷ್ಟೇ ಮಹಿಳಾಪ್ರಶ್ನೆಯನ್ನು ಸಾರ್ವತ್ರಿಕಗೊಳಿಸುವುದಿಲ್ಲ. ಹಾಗೆಯೇ ರಾಜ್ಯ ಸಭಾ ಸದಸ್ಯೆ ಶ್ರೀಮತಿ ಭಾರತಿರೇ ಹೇಳುವಂತೆ, ಇಂತಹ ಸಮಾವೇಶಗಳು ಮಹಿಳಾ ಸಂಘಟನೆಯಲ್ಲಿ ತೊಡಗಿರುವವರಿಗೆ ವಿಪುಲವಾದ ಅನುಭವವನ್ನು ಕೊಡುತ್ತದೆ. ಅಭಿವೃದ್ಧಿಶೀಲ ರಾಷ್ಟ್ರಗಳನ್ನು ಪ್ರತಿನಿಧಿಸಿದ ಬಹಳಷ್ಟು ಮಹಿಳೆಯರು ತೋರಿಸಿದ ಆತ್ಮವಿಶ್ವಾಸ ನಮಗೆಲ್ಲ ಸ್ಫೂರ್ತಿದಾಯಕವಾದದ್ದು ನಮ್ಮಲ್ಲಿ ಐಕ್ಯತೆಯ ಭಾವನೆಯನ್ನು ಉಂಟು ಮಾಡುವುದಷ್ಟೇ ಅಲ್ಲ, ನಮ್ಮ ಹಕ್ಕುಗಳ ಬಗ್ಗೆ ನಮ್ಮ ಅಗತ್ಯಗಳ ಬಗ್ಗೆ ಹಲವಾರು ಹೊಸ ಹೊಸ ವಿಚಾರಗಳ ಪರಿಚಯಮಾಡಿಸುತ್ತದೆ.

ಈ ಎಲ್ಲ ಅನುಭವಗಳಲ್ಲಿ ತಥ್ಯವಿದೆಯಾದರೂ ಈ ಜಾಗತಿಕ ಅನುಭವದ ಫಲಶ್ರುತಿಯನ್ನು ನಮ್ಮ ನೆಲದ ಬೇರುಗಳಿಗೆ ಹನಿಸುವ ಪ್ರಕ್ರಿಯೆ ಹೇಗಿರಬೇಕು ? ಯಾವ ದಿಕ್ಕಿನಲ್ಲಿ ಸಾಗಬೇಕು, ಎಂಬುದೇ ನಮ್ಮ ಮುಂದಿರುವ ಸವಾಲು.

ಎನ್. ಗಾಯತ್ರಿ

ಬದುಕುವ ಹಕ್ಕನ್ನೂ ಕಿತ್ತುಕೊಂಡ 'ಮರ್ಯಾದಾ ಹತ್ಯೆ'ಗಳು

- ನೇಮಿಚಂದ್ರ

ಮುಖದ ತುಂಬಾ ಬಿಳಿಯ ದುಪ್ಪಟ್ಟವನ್ನು ಬಾರಿ ಬಾರಿಗೆ ಎಳೆದುಕೊಳ್ಳುತ್ತಾಳೆ ಜಹೀದಾ ಪರ್ವೀನ್, ಪುಟ್ಟ ಕಂದನನ್ನು ಹಿಡಿಯಲು ಬಗ್ಗಿದಾಗ ತಟ್ಟನೆ ಅದು ಜಾರುತ್ತದೆ, ಭೀಭತ್ಸ ಮುಖ ಎದೆ ನಡುಗಿಸುತ್ತದೆ - ಕಣ್ಣುಗಳು ಕೊರೆದು ತೆಗೆದ ಎರಡು ಗುಳಿಗಳು, ಕಿವಿಗಳು ಕತ್ತರಿಸಿ ಹೋಗಿವೆ. ತುಂಡರಿಸಿದ ಮೂಗಿನ ಜಾಗದಲ್ಲಿ ಎರಡು ತೂತುಗಳು ಎದ್ದು ಕಾಣುತ್ತವೆ. ಏನು ಈಕೆ ಅಪಘಾತಕ್ಕೊಳಗಾದವಳೆ ? ಇಲ್ಲ, ಇದು ಆಕೆಯ ಪತಿಯ ಬಳುವಳಿ! 'ಪತ್ನಿ ಮೈದುನನೊಡನೆ ಮಾತನಾಡಿದಳು, ಆಕೆಗೆ ಆತನೊಡನೆ ಸಂಬಂಧವಿದೆ' ಎಂಬ ಅನುಮಾನವೇ ಸಾಕಿತ್ತು, ಪತಿಯನ್ನು ಕೋಪದಿಂದ ಕೆರಳಿಸಲು, ಜಹೀದಾ ಪರಿಯಾಗಿ ಹೇಳಿದರೂ ನಂಬದ ಗಂಡ, ಆಕೆಯನ್ನು ಕಟ್ಟಿಹಾಕಿ, ರೇಸರ್ ಮತ್ತು ಚಾಕುವಿನಿಂದ ಮುಖವನ್ನು ಕೊರೆದು, ಕತ್ತರಿಸಿ ವಿಕಾರಗೊಳಿಸಿದ. ಆಕೆ ಆಗ ಮೂರು ತಿಂಗಳ ಗರ್ಭಿಣಿ! ಕೋಪೋದ್ರಿಕ್ತ ಕ್ಷಣದಲ್ಲಿ ಎಸಗಿದ ಕೃತ್ಯ, ನಂತರ ಪಶ್ಚಾತ್ತಾಪ ಪಟ್ಟಿರಬಹುದು ಎಂದು ನೀವು ಭಾವಿಸಿದರೆ ಅದು ಸುಳ್ಳು. ಒಂದು ವರ್ಷದ ನಂತರವೂ ಆಕೆಯ ಗಂಡ ಹೇಳುವುದೇನು ಗೊತ್ತೆ, 'ನಾನು ಮಾಡಿದ ಕೆಲಸದಿಂದ ನನಗೆ ತೃಪ್ತಿಯಾಗಿದೆ, ಪಶ್ಚಾತ್ತಾಪವಿಲ್ಲ'. ಕೋರ್ಟಿನ ಅಂಗಳದ ಕೆಲವು ಗಂಡಸರನ್ನು ವರದಿಗಾರರು ಪ್ರತಿಕ್ರಿಯೆ ವ್ಯಕ್ತಪಡಿಸಲು ಕೇಳಿದಾಗ, ಅವರು ಹೇಳಿದ್ದೇನು ಗೊತ್ತೆ - 'ಯಾರೇ ಗಂಡಸು ಮಾಡುವುದನ್ನೇ ಇಕ್ಬಾಲ್ ಮಾಡಿದ್ದಾನೆ'. ನಿಜ, ತಮ್ಮ ಗಂಡುತನವನ್ನು ಸಾಬೀತು ಮಾಡಲು, ಹೆಂಡತಿಯ ಮೇಲಿನ ಹಕ್ಕನ್ನು ಪ್ರತಿಷ್ಠಾಪಿಸಲು ಇದಕ್ಕಿಂತ ಒಳ್ಳೆಯ ಮಾರ್ಗ ಇನ್ನಾವುದಿದ್ದೀತು?

ಪಾಕಿಸ್ತಾನದ ರಾವಲ್‌ಪಿಂಡಿಯ ಬಳಿ ವಾಸಿಸುವ ಪರ್ವೀನ್ 32 ವರ್ಷದ ವಿವಾಹಿತ ಸ್ತ್ರೀ. ಆ ದಿನ ಇಕ್ಬಾಲ್ ಮನೆಗೆ ಬಂದವನೇ 'ನಿನಗೆ ನನ್ನ ತಮ್ಮನ ಜೊತೆ ಸಂಬಂಧವಿದೆ' ಎಂದು ಆರೋಪಿಸಿದ. 'ಇದು ಸತ್ಯವಲ್ಲ' ಎಂಬ ಆಕೆಯ ಅಸಹಾಯಕ ಮೊರೆಯಾಗಲಿ, ಮೂರು ತಿಂಗಳ ಗರ್ಭಿಣಿಯ ಆರ್ತನಾದವಾಗಲಿ ಅವನನ್ನು ತಡೆಯಲಿಲ್ಲ. ಇಂದು ಪಾಕಿಸ್ತಾನದಲ್ಲಿ ಸಾವಿರಾರು ಮಹಿಳೆಯರು, ಎಳೆಯ ಹುಡುಗಿಯರು, ತಮ್ಮ ಗಂಡ, ತಂದೆ, ಇಲ್ಲ ಸೋದರರಿಂದ ಇರಿಯಲ್ಪಡುತ್ತಾರೆ, ಕತ್ತರಿಸಲ್ಪಡುತ್ತಿದ್ದಾರೆ. ಸುಡಲ್ಪಡುತ್ತಿದ್ದಾರೆ, ಅಂಗವಿಕಲರಾಗುತ್ತಿದ್ದಾರೆ. ಕಾರಣ ಅವರು ತಮ್ಮ ಇಷ್ಟದ ಹುಡುಗನನ್ನು ಆಯ್ದುಕೊಂಡದ್ದಾಗಿರಬಹುದು, 'ತಮಗೆ ನಿಷ್ಠರಾಗಿಲ್ಲ' ಎಂಬ ಪತಿಯ ಅನುಮಾನವಾಗಿರಬಹುದು, 'ಮಗಳು ವಿಚ್ಛೇದನ ಬಯಸಿ ಮನೆತನಕ್ಕೆ ಕಳಂಕ ತಂದವಳು' ಎಂಬ ನೆಪವಾಗಿರಬಹುದು. ಕುಟುಂಬದ ಗೌರವದ ಹೆಸರಿನಲ್ಲಿ ಪುರುಷರು ಹೆಂಗಸರ ಮೇಲೆ ಎಸಗುವ ಇಂಥ ಪೈಶಾಚಿಕ ಕೃತ್ಯಕ್ಕೆ 'ಮರ್ಯಾದಾ ಹತ್ಯೆ' ಎಂಬ ಹೆಸರು. ಸಾಂಪ್ರದಾಯಿಕ ಸಮಾಜ ಹೆಣ್ಣನ್ನು ಸಂರಕ್ಷಿಸುತ್ತದೆ ಎಂಬ ಭ್ರಮೆ ಇದ್ದರೆ, ಇಂಥಾ ಹಾಡುಹಗಲ ಹತ್ಯೆಗಳು ನಿಮ್ಮ ಕಣ್ಣು ತೆರೆಸುತ್ತವೆ. ಪುರುಷಪ್ರಧಾನ ಸಮಾಜ ಪರಾಕಾಷ್ಠೆಯ ಪ್ರತಿಬಿಂಬ ಈ ಹತ್ಯೆಗಳು. ಹೆಣ್ಣಿಗೆ ತನ್ನ ಇಚ್ಛೆಯ ಗಂಡನನ್ನು ಆಯ್ದುಕೊಳ್ಳುವ ಹಕ್ಕಿಲ್ಲ, ಹೆಣ್ಣಿಗೆ ಎಂಥಾ ಕೆಟ್ಟ ವಿವಾಹದಿಂದಲೂ ವಿಚ್ಛೇದನ ಪಡೆಯುವ ಹಕ್ಕಿಲ್ಲ, ಆಕೆಯ ಬದುಕು ಸಂಪೂರ್ಣವಾಗಿ ತಂದೆ, ಸೋದರ, ಗಂಡನ ಅಧೀನಕ್ಕೆ ಒಳಪಟ್ಟಿದ್ದು ಎಂದು ಭಾವಿಸುವ ಸಮಾಜದ ಭೀಕರ ಕೃತ್ಯಗಳಿವು.

1996ರಲ್ಲಿ ಎಂ.ಬಿ.ಎ. ವಿದ್ಯಾರ್ಥಿನಿ ಸೈಮಾ ವಹೀದ್ ತನ್ನ ಇಂಗ್ಲಿಷ್ ಪ್ರಾಧ್ಯಾಪಕರಾದ ಅರ್ಶದ್ ಅಹ್ಮದ್ ಅವರನ್ನು ತನ್ನ ಪಾಲಕರ ಒಪ್ಪಿಗೆ ಇಲ್ಲದೆಯ ವಿವಾಹವಾದಳು. 'ಈ ಮದುವೆಗೆ ತನ್ನ ಅನುಮತಿ ಇಲ್ಲದಿರುವ ಕಾರಣ ಇದು ಕುರಾನಿಗೆ ವಿರುದ್ಧವಾಗಿದೆ. ಮದುವೆಯನ್ನು ತಕ್ಷಣ ರದ್ದು ಮಾಡಬೇಕು' ಎಂದು ಕೋರಿ ಆಕೆಯ ತಂದೆ ಕೋರ್ಟಿನಲ್ಲಿ ದಾವಾ ಹೂಡಿದ. ಲಾಹೋರಿನ ಹೈಕೋರ್ಟ್ ಆತನ ವ್ಯಾಜ್ಯವನ್ನು ಸ್ವೀಕರಿಸಿತ್ತು. ದೇಶದಾದ್ಯಂತ ವಾದವಿವಾದನ್ನು ಹುಟ್ಟಿಸಿದ ಕೇಸ್ ಇದು. ಒಂದೆಡೆ ಮಹಿಳೆ ಮತ್ತು ಮಾನವ ಹಕ್ಕುಗಳ ಹೋರಾಟಗಾರರು, ಇನ್ನೊಂದೆಡೆ ಸಂಪ್ರದಾಯಸ್ಥ ಮುಸ್ಲಿಮರು ಮತ್ತು ಧಾರ್ಮಿಕ ಕರ್ಜಿಗಳು. ಸಾವಿನ ಬೆದರಿಕೆಯನ್ನು ಎದುರಿಸಿದ ಸೈಮಾಳ ಗಂಡ ಜೀವಭಯದಿಂದ ಅವಿತುಕೊಳ್ಳಬೇಕಾಯಿತು. ಮಾನವ ಹಕ್ಕುಗಳ ಚಳುವಳಿಗಾರ್ತಿ ಅಸ್ಮಾ ಜಹಂಗೀರ್ ಸೈಮಾಳ ಕೇಸನ್ನು ಎತ್ತಿಕೊಂಡರು. ಹತ್ತು ತಿಂಗಳ ವಾದ-ವಿವಾದದ ನಂತರ ಲಾಹೋರ್ ಹೈಕೋರ್ಟ್ ಕಡೆಗೂ ಸೈಮಾಗೆ ತನ್ನ ಗಂಡನನ್ನು ಸೇರಿಕೊಳ್ಳಲು ಅನುಮತಿ ನೀಡಿದರೂ, ನ್ಯಾಯಾಧೀಶರು 'ಇಂಥಾ ಪ್ರಕರಣಗಳಾಗದಂತೆ ತಡೆಯಲು ಗಂಡಸರು - ಹೆಂಗಸರು ಸಮೀಪಕ್ಕೆ ಬಾರದಂತೆ ಶಾಸನ ತರಬೇಕೆಂದು' ತಿಳಿಸಿದರು! 'ಅಂದರೆ ಹೆಣ್ಣಾದ ನನಗೆ ಗಂಡಸರಿರುವ ಕೋರ್ಟಿನಲ್ಲಿ ನನ್ನ ಕಕ್ಷಿಗಾರಳ ಪರವಾಗಿ ವಾದಿಸುವ ಹಕ್ಕೂ ಇಲ್ಲವೆಂದೇ?' ಅಸ್ಮಾ ಕೋಪದಿಂದ ಕೂಗಿದ್ದರು. ಹೇಗಿದ್ದರೂ ಸೈಮಾಳ ಕೇಸು ಮಾನವ ಹಕ್ಕುಗಳ ಹೋರಾಟಗಾರರಿಗೆ, ಮಹಿಳಾ ಹಕ್ಕುಗಳ ಪ್ರತಿಪಾದಕರಿಗೆ, ಅಸ್ಮಾ ಜಹಂಗೀರ್ ಅವರಿಗೆ ಸಣ್ಣ ವಿಜಯವನ್ನು ತಂದಿತ್ತು.

ಆದರೆ ಎರಡು ವರ್ಷಗಳ ನಂತರ ಇದೇ ಮಾನವ ಹಕ್ಕುಗಳ ಹೋರಾಟಗಾರ್ತಿಯ ಕಛೇರಿಯಲ್ಲಿ ಆಕೆಯ ಕಣ್ಣೆದುರಿನಲ್ಲಿಯೇ ಸಮೀಯಾ ಇಮ್ರಾನ್ ಎಂಬ ಮಹಿಳೆಯನ್ನು ಗುಂಡಿಕ್ಕಿ ಕೊಲ್ಲಲಾಯಿತು. ಸಮೀಯಾಳ ಅಪರಾಧ ಆಕೆ ವಿಚ್ಛೇದನ ಬಯಸಿ ಮನೆತನದ ಗೌರವಕ್ಕೆ ಧಕ್ಕೆ ತಂದದ್ದು! ಆಕೆಯ ತಂದೆಯೇ ಈ ಕೊಲೆಯನ್ನು ಮಾಡಿಸಿದ್ದರು. 28 ವರ್ಷದ ಸಮಿಯಾ ಇಮ್ರಾನ್ ತನ್ನ ಕ್ರೂರಿ ಗಂಡನಿಂದ ವಿಚ್ಛೇದನ ಬಯಸಿದ್ದಳು. ಉಗ್ರ ಕೋಪದ ತೀವ್ರಹಿಂಸೆಯ ಗಂಡನಿಂದ ಬಿಡುಗಡೆ ಪಡೆಯಲು ಈಕೆ ಲಾಹೋರಿನ ಹೀನಾ

ಜಿಲಾನಿ ಮತ್ತು ಅಸ್ಮಾ ಜಹಂಗೀರ್ ಅವರ ಕಛೇರಿಗೆ ಬಂದಳು. ಐದೇ ನಿಮಿಷದಲ್ಲಿ ಹಬೀಬ್ ರೆಹ್ಮಾನ್ ಎಂಬ ಮನುಷ್ಯ ಒಳ ನುಗ್ಗಿದವನೇ ಸಮೀಯಾಳ ತಲೆಗೆ ಪಿಸ್ತೂಲ್ ಹಿಡಿದು ಗುಂಡು ಹಾರಿಸಿದ. ಪೋಲಿಸ್ ಗಾರ್ಡ್ ಒಬ್ಬ ಹಿಂಬಾಲಿಸಿ ಗುಂಡು ಹಾರಿಸುತ್ತಿದ್ದಂತೆ, ಜೊತೆಗೆ ಬಂದಿದ್ದ ಸಮೀಯಾಳ ಮಾಮ ಯೂನಸ್, ತಮ್ಮ ರಕ್ಷಣೆಗೆ ಅಲ್ಲಿದ್ದ ಮಹಿಳಾ ಚಳುವಳಿಗಾರ್ತಿ ಶಹ್ತಾಜಳ ಕೈಹಿಡಿದು ಎಳೆದೊಯ್ದ. ಅವರೆಲ್ಲರೂ ಒಂದು ಆಟೋರಿಕ್ಷಾದಲ್ಲಿ ಕುಳಿತವರೇ ಒಂದು ಹೋಟೇಲಿನ ಮುಂದೆ ಇಳಿದರು. ಒಳಗೆ ಕಾಯುತ್ತಿದ್ದ ಸಮೀಯಾಳ ತಂದೆಗೆ 'ಕೆಲಸ ಮುಗಿಯಿತು' ಎಂದು ಕೂಗಿ ಹೇಳಿದರು. ಸಮೀಯ ವಿಚ್ಛೇದನ ಪಡೆದು ಮನೆತನದ ಗೌರವಕ್ಕೆ ಧಕ್ಕೆ ತರುವ ಮೊದಲು ಆಕೆಯನ್ನು ಮುಗಿಸಿಬಿಡಲು ಆಕೆಯ ತಂದೆ-ತಾಯಿ ಮತ್ತು ಸೋದರ ಬಯಸಿದ್ದರು.

ಸಮೀಯಳ ಪ್ರಕಣದಿಂದ ಜನ ಎಚ್ಚೆತ್ತು ಆಕೆಯ ಕೊಲೆಗಾರಿಗೆ ಶಿಕ್ಷೆ ಕೊಡುವಂತೆ ಕೂಗಿದ್ದು ಕೇಳಿಬರಲಿಲ್ಲ, ಬದಲು ಸಮೀಯಳಿಗೆ ರಕ್ಷಣೆ ನೀಡಿದ ಅಸ್ಮಾ ಜಹಂಗೀರ್ ಮತ್ತು ಜಿಲಾನಿಗೆ ಶಿಕ್ಷೆ ನೀಡುವ ಕೂಗಿತ್ತು! 'ಇಸ್ಲಾಮಿಕ್ ಆಚರಣೆಗಳನ್ನು ದೇಶದ ಸುಪ್ರಿಂ ಕಾಯಿದೆಯಾಗಿಸುವ ಮೂಲಕ ಸರಕಾರ ಇಂಥಾ ಕೊಲೆಗಳಿಗೆ ಪ್ರೋತ್ಸಾಹ ನೀಡುತ್ತಿದೆ' ಎಂದು ಚಳುವಳಿಗಾರರು ಅಭಿಪ್ರಾಯಪಡುತ್ತಾರೆ. ಮಹಿಳೆಯರಿಗೆ ಅನೇಕಾನೇಕ ಹಕ್ಕುಗಳನ್ನು ನೀಡಿರುವ ಇಸ್ಲಾಂ ಧರ್ಮದಲ್ಲೆಲ್ಲೂ ಇಂಥಾ ಕೊಲೆಗೆ ಮನ್ನಣೆ ಇಲ್ಲ. ಆದರೆ ಧರ್ಮವನ್ನು ತಮ್ಮ ಇಚ್ಛೆಯಂತೆ ಅರ್ಥೈಸುವ ಪುರುಷ ಪ್ರಧಾನ ಸಮಾಜದ ಪ್ರಬಲರು, ಹೆಣ್ಣಿನ ಮೇಲೆ ನಿರಂತರ ಶೋಷಣೆ ನಡೆಸಿದ್ದಾರೆ.

ಶ್ರೀಮಂತರ ಮನೆಯಲ್ಲಿ ಹುಟ್ಟಿದ ಸಮೀಯಾಳ ವಿವಾಹ 1989ರಲ್ಲಿ ಆಕೆಯ ಸಂಬಂಧಿಯೊಡನೆ ನಡೆದಿತ್ತು. 1995ರಲ್ಲಿ ಎರಡನೇ ಬಾರಿ ಗರ್ಭಿಣಿಯಾದ ಸಮಿಯಾ, ವರ್ಷಗಳ ಗಂಡನ ಹಿಂಸೆ, ಕ್ರೌರ್ಯದಲ್ಲಿ ಕುಗ್ಗಿಹೋಗಿ ಗಂಡನನ್ನು ಬಿಟ್ಟು ತೌರಿಗೆ ಬಂದಳು. ನಂತರ ಆಕೆ ಲಾಹೋರಿನ ಏಕೈಕ ಖಾಸಗಿ ಮಹಿಳಾ ರಕ್ಷಣಾ ತಾಣವಾದ 'ದಸ್ತಕ್'ನಲ್ಲಿ ಆಶ್ರಯ ಪಡೆದಿದ್ದಳು. ಆಕೆ ವಿದ್ಯಾಭ್ಯಾಸ ಮುಂದುವರೆಸಿದಾಗ ಮನೆಯವರ ವಿರೋಧವಿರಲಿಲ್ಲ, ಆದರೆ ವಿಚ್ಛೇದನ ಬಯಸಿದಾಗ ಗುಂಡಿಗೆ ಬಲಿಯಾದಳು.

ಸಮೀಯಾಳ ಸಾವಿನ ಹಿಂದೆಯೇ ದಿನಪತ್ರಿಕೆಯಲ್ಲಿ 'ಇಸ್ಲಾಂ ವಿರುದ್ಧ, ಪಾಕಿಸ್ತಾನದ ವಿರುದ್ಧ, ಕೌಟುಂಬಿಕ ಜೀವನ ವಿರುದ್ಧ ಕೆಟ್ಟ ಕೊಳಕು ಪಿತೂರಿ ನಡೆಯುತ್ತಿದೆ' ಎಂದು ಸಾರಿದ ಜಾಹಿರಾತುಗಳು ಪ್ರಕಟವಾದವು. ಈ ಜಾಹಿರಾತುಗಳು ಗುರಿ ಇಟ್ಟದ್ದು ಜಿಲಾನಿ, ಅಸ್ಮಾ ಜಹಂಗೀರ್ ಮತ್ತು ಅಸಹಾಯಕ ಮಹಿಳೆಯರಿಗೆ ಆಶ್ರಯ ನಿಡುವ ತಾಣಗಳನ್ನು. ಪಾಕಿಸ್ತಾನದ ರಾಜಕಾರಣಿಗಳೂ ಜಿಲಾನಿ ಮತ್ತು ಅಸ್ಮಾ ಜಹಂಗೀರ್‌ರನ್ನು ಶಿಕ್ಷಿಸಬೇಕೆಂದು ಕೂಗು ಹಾಕಿದರು. ಕೊಲೆಗಾರರನ್ನು ಹಿಡಿದು ಶಿಕ್ಷಿಸುವುದಿರಲಿ, ನ್ಯಾಯವಾದಿಗಳಿಗೇ ಶಿಕ್ಷೆ ಕೊಡಬೇಕೆಂಬ ಕೂಗು! ಹೇಗಿದೆ ಇಲ್ಲಿಯ ನ್ಯಾಯ!

ಸಮೀಯಾಳ ಕೇಸಿನಂತೆ ಎಲ್ಲಾ 'ಮರ್ಯಾದಾ ಹತ್ಯೆ'ಗಳೂ ಬೆಳಕಿಗೆ ಬರುವುದಿಲ್ಲ. ಬದುಕುಳಿದ ಹೆಣ್ಣುಗಳೂ ತಮ್ಮ ಮೇಲಿನ ಆಕ್ರಮಣವನ್ನು ಭೀತಿಯಿಂದ ಮುಚ್ಚಿಡುತ್ತಾರೆ. ಬೇರೆ ದಾರಿಯಿಲ್ಲದ ಅನಿವಾರ್ಯದಲ್ಲಿ 'ಅಪಘಾತ' ಎಂದು ಉಲಿದು ಅದೇ ಹಿಂಸೆಯ ಕೂಪಕ್ಕೆ, ಕೊಲೆಗಡುಕರ ನಡುವಿನ ಬದುಕಿಗೆ ಹಿಂತಿರುಗುತ್ತಾರೆ. ಪಾಕಿಸ್ತಾನದ ಮಾನವ ಹಕ್ಕುಗಳ ನಿಯೋಗದ ಪ್ರಕಾರ 1997ರಲ್ಲಿ ಸಿಂಧ್ ಪ್ರಾಂತವೊಂದರಲ್ಲೇ 300 ಮಹಿಳೆಯರು ಇಂಥಾ 'ಗೌರವದ ಕೊಲೆ'ಗೆ ಬಲಿಯಾದರು. 1998 ಮತ್ತು 1999ರ ಎರಡು ವರ್ಷದಲ್ಲಿಯೇ, ಪಾಕಿಸ್ತಾನದ ಪಂಜಾಬ್ ಪ್ರಾಂತವೊಂದರಲ್ಲಿಯೇ, 850 ಮಹಿಳೆಯರು ತಮ್ಮ ತಂದೆ, . ಅಣ್ಣ-ತಮ್ಮ, ಇಲ್ಲ ಗಂಡನ ಕೈಯಿಂದ ಕೊಲೆಯಾಗಿದ್ದಾರೆ!

ಕೊಲೆಗೆ ಅತಿ ಸಣ್ಣ ಕಾರಣ ಸಾಕು. ನಲವತ್ತು ವರ್ಷದ ಜರೀನಾಳ ಎಳೆಯ ಮಗಳನ್ನು ಇಪ್ಪತ್ತು ವರ್ಷದ ಆಕೆಯ ಮಲಮಗ ಗುಂಡಿಟ್ಟು ಕೊಂದ. ಕಾರಣ ಆ ಹುಡುಗಿ ಮಲಅಣ್ಣನಿಗೆ ಇಷ್ಟವಿಲ್ಲದ ಹುಡುಗನನ್ನು ವಿವಾಹವಾಗಲು ಬಯಸಿದ್ದಳು! ಮಗನನ್ನೇ ಸಮರ್ಥಿಸಿದ ಗಂಡನಿಂದ, ಭಯಭೀತಳಾದ ಜರೀನಾ ವಿಚ್ಛೇದನ ಕೇಳಿದಾಗ, ಎರಡು ವರ್ಷದ ಆಕೆಯ ಇನ್ನೊಬ್ಬ ಮಗಳನ್ನು ಕೊಲ್ಲುವುದಾಗಿ ಬೆದರಿಸಿದ.

ಕೌಸರ್ ಪರ್ವೀನ್ ನಾಲ್ಕು ಮಕ್ಕಳ ತಾಯಿ. ಅವಳನ್ನು ಆಕೆಯ ಅತ್ತೆ ಮನೆಯವರು ಬಡಿದು ಸುಟ್ಟರು. ಕಾರಣ ಮನೆಯ ಹೊರಗೆ ಸೊಸೆ ಕಾಲಿಡಬಾರದು ಎಂದು ವಿಧಿಸಿದಾಗ, ಆಕೆ ತನ್ನ ರೋಗಗ್ರಸ್ಥ ತಂದೆ ತಾಯಿಯರನ್ನು ಕಾಣಲು ಮನೆಯ ಹೊರಗೆ ಕಾಲಿಟ್ಟಿದ್ದಳು! ಬಹಳಷ್ಟು ಕೊಲೆಗಳು ಮನೆಯೊಳಗಿನ ಆಕಸ್ಮಿಕವಾಗಿ ದಾಖಲಾಗಿ ಮುಗಿದು ಹೋಗುತ್ತದೆ.

ನಿಜಕ್ಕೂ ಇಪ್ಪತ್ತೊಂದನೆ ಶತಮಾನಕ್ಕೆ ಕೆಲದೇಶದ ಕೆಲವರಷ್ಟೆ ಕಾಲಿಟ್ಟಿದ್ದಾರೆ, ಜಗತ್ತಿನ ಬಹುಭಾಗದ ಮಹಿಳೆಯರ ಬದುಕು ಮಧ್ಯಯುಗದ ಕತ್ತಲೆಯಿಂದ ಮುಕ್ತವಾಗಿಲ್ಲ. ಹೊರಗಿನ ಗಂಡಸರಿಂದ ರಕ್ಷಿಸಲು ಹೆಣ್ಣನ್ನು ಪರದೆಯಲ್ಲಿರಿಸಿ ಮನೆಯಲ್ಲಿ ಅಡಗಿಸುತ್ತಾರೆ. ಆದರೆ ಒಳಗಿನ ಗಂಡಸರಿಂದ ಹೆಣ್ಣೆಲ್ಲಿ ಸುರಕ್ಷಿತವಿದ್ದಾಳೆ? ಇದು ಪಾಕಿಸ್ತಾನವೊಂದರ ಕತೆಯಲ್ಲ, 'ಮನೆತನಕ್ಕೆ ಕಳಂಕ ತಂದಳು' ಎಂದು ಮನೆಯವರಿಂದಲೇ ನಡೆಯುವ ಹತ್ಯೆಗಳು ಭಾರತಕ್ಕೂ ಹೊಸದಲ್ಲ. ಹೆಣ್ಣು ಸದಾ ಕಾಲಕ್ಕೂ ತಂದೆ, ಸೋದರ, ಇಲ್ಲ ಗಂಡನ ಇಚ್ಛೆ, ಆಜ್ಞೆಯಂತೆ ಬದುಕ ಬೇಕಿದೆ. ನಿಜಕ್ಕೂ ದೇಶಕ್ಕೆ ಸ್ವತಂತ್ರ ಬಂದಿದೆ ಎನ್ನುವುದು ಶುದ್ಧ ಸುಳ್ಳು, ಸ್ವತಂತ್ರ ಬಂದಿರುವುದು ಗಂಡಸರಿಗೆ ಮಾತ್ರ. ಹೆಂಗಸರಿನ್ನೂ ಬಂಧನದಲ್ಲಿದ್ದಾರೆ, ಪರಾಡಳಿತದಿಂದ ಮುಕ್ತರಾದರೂ, 'ಪುರಷಾಡಳಿತ'ದ ಪದತಳದಲ್ಲಿ ತುಳಿಯಲ್ಪಡುತ್ತಿದ್ದಾರೆ. ಮಹಿಳಾ ಹಕ್ಕುಗಳಿಗಾಗಿ, ಮಾನವ ಹಕ್ಕುಗಳಿಗಾಗಿ ವ್ಯಾಪಕ ಹೋರಾಟ ನಡೆಯದಿದ್ದರೆ, ಹೆಣ್ಣಿಗೆ ಬದುಕುವ ಹಕ್ಕು ಕೂಡ ಉಳಿಯುವುದಿಲ್ಲ.

ಕಾನೂನಿನ ಪಳೆಯುಳಿಕೆಗಳು

- ಹೇಮಲತಾ ಮಹಿಷಿ

ಇತಿಹಾಸದ ಪಳಿಯುಳಿಕೆಗಳು ಕಲ್ಲು-ಮಣ್ಣಿನಲ್ಲಿ ಮಾತ್ರ ಸಿಗುತ್ತದೆಂದು ತಿಳಿಯಬಾರದು. ಅವು ಒಂದು ದೇಶದ ಸಂಸ್ಕೃತಿಯಲ್ಲಿ, ಕಾನೂನುಗಳಲ್ಲಿ ಜನ-ಜೀವನದಲ್ಲಿ, ಮನೆ-ಮನೆಗಳಲ್ಲಿ, ಮನಗಳಲ್ಲಿಯೂ ಉಳಿದಿರುತ್ತದೆ. ಹುಡುಕಿದರೆ ಬೆಳಕಿಗೆ ಬರುತ್ತವೆ. ನಮ್ಮ ದೇಶದ ಅನೇಕ ಕಾನೂನುಗಳು ಇಂತಹ ಪಳಿಯುಳಿಕೆಗಳಾಗಿವೆ.

1860ರಲ್ಲಿ ಜಾರಿಗೆ ಬಂದ ಭಾರತ ದಂಡ ಸಂಹಿತೆ (ಇಂಡಿಯನ್ ಪೀನಲ್ ಕೋಡ್) ಬ್ರಿಟೀಶರ ಕಾಲದ ಕಾನೂನಾಗಿದ್ದು 140 ವರ್ಷಗಳು ಕಳೆದ ನಂತರವೂ ಕಡಿಮೆ ತಿದ್ದುಪಡಿಗಳೊಂದಿಗೆ ಹಾಗೆಯೇ ಜಾರಿಯಲ್ಲಿದೆ. ಇದರಲ್ಲಿರುವ ಕೆಲವೊಂದು ವಿಷಯಗಳು. ಇಂದು ಅಸಂಗತವಾದರೂ ಈಗಲೂ ಹಾಗೆಯೇ ಉಳಿದಿವೆ. ಹಾಗೆಂದೇ ಅವು ವಿಕ್ಟೋರಿಯನ್ ಯುಗದ ಮೌಲ್ಯದ ಪಳಿಯುಳಿಕೆಗಳಾಗಿವೆ. ಮಹಿಳೆಯರಿಗೆ ಸಂಬಂಧಿಸಿದಂತೆ ಹೇಳುವುದಾದರೆ, 497 ಮತ್ತು 498ನೇ ಪ್ರಕರಣಗಳು ಮತ್ತು 494ನೇ ಪ್ರಕರಣ 21ನೇ ಶತಮಾನಕ್ಕೆ ಕಾಲಿಡುತ್ತಿರುವ ಸಮಾಜಕ್ಕೆ ಹಾಸ್ಯಸ್ಪದವಾಗಿ ಕಾಣುತ್ತದೆ.

497ನೇ ಪ್ರಕರಣ ವ್ಯಭಿಚಾರಕ್ಕೆ ಸಂಬಂಧಿಸಿದೆ. ಮಹಿಳೆಯೊಬ್ಬಳು ಮತ್ತೊಬ್ಬ ಪುರುಷನ ಪತ್ನಿ ಎಂದು ತಿಳಿದಿದ್ದೂ ಅಥವಾ ತಿಳಿಯಲು ಕಾರಣಗಳಿದ್ದೂ, ಆ ಪುರುಷನ ಒಪ್ಪಿಗೆ ಅಥವಾ ಪರೋಕ್ಷ ಸಮ್ಮತಿಯಿಲ್ಲದೇ, ಆ ಮಹಿಳೆಯ ಒಪ್ಪಿಗೆಯಿಂದ ಪರ-ಪುರುಷನು ಲೈಂಗಿಕ ಸಂಬಂಧ ಮಾಡಿದರೆ ಅದು 'ವ್ಯಭಿಚಾರ'ದ ಅಪರಾಧವಾಗುತ್ತದೆ. ಅದಕ್ಕಾಗಿ ವಿವಾಹಿತ ಮಹಿಳೆಯೊಂದಿಗೆ ಲೈಂಗಿಕ ಸಂಬಂಧ ಮಾಡಿದ ಪರ-ಪುರಷನಿಗೆ 5 ವರ್ಷಗಳವರೆಗೆ ಕಠಿಣ ಅಥವಾ ಸರಳ ಕಾರಾಗೃಹವಾಸದ ಶಿಕ್ಷೆಯನ್ನು ಮತ್ತು ದಂಡವನ್ನು ವಿಧಿಸಬಹುದಾಗಿದೆ. ಆದರೆ, ಅಂತಹ ಪ್ರಕರಣಗಳಲ್ಲಿ ವಿವಾಹಿತ ಮಹಿಳೆಯು ಅಪರಾಧಿಯಾಗುವುದಿಲ್ಲ, ಅಪರಾಧಕ್ಕೆ ಕುಮ್ಮಕ್ಕು ಕೊಟ್ಟವಳೂ ಆಗುವುದಿಲ್ಲ.

ಮೇಲು ನೋಟಕ್ಕೆ ಈ ಕಾನೂನಿನಲ್ಲಿ ವಿಶೇಷವೇನು ಕಂಡುಬರದಿದ್ದರೂ ಸ್ತ್ರೀಪರವೆನಿಸಿದರೂ ಅದನ್ನು ಸ್ತ್ರೀವಾದ ದೃಷ್ಟಿಕೋನದಿಂದ ವಿವೇಚಿಸಿ, ಒಳಹೊಕ್ಕು ನೋಡಿದಾಗ ಅದೆಷ್ಟು ಸ್ತ್ರೀಯರ ವಿರುದ್ಧವಾಗಿದೆ ಎಂಬುದು ಕಂಡು ಬರುತ್ತದೆ.

ಮೊದಲನೆಯದಾಗಿ ವಿವಾಹಿತ ಮಹಿಳೆಯೊಂದಿಗೆ ಪರ-ಪುರುಷ ಲೈಂಗಿಕ ಸಂಬಂಧ ಮಾಡುವುದು, ಅವಳ ಒಪ್ಪಿಗೆ ಇದ್ದರೂ ಅದು ಅವನ ಅಪರಾಧವಾಗುತ್ತದೆ. ಯಾರ ಬಗ್ಗೆ ಅಪರಾಧ ಅದು ಎಂದರೆ, ಅವಳ ಪತಿಯ ಬಗ್ಗೆ ಅವನು ಮಾಡಿದ ಅಪರಾಧ. ಇಲ್ಲಿ ಮಹಿಳೆಯ ಒಪ್ಪಿಗೆಗೆ ಬೆಲೆಯಿಲ್ಲ. ಏಕೆಂದರೆ, ಆ ಮಹಿಳೆ ಪತಿಯ ಆಸ್ತಿಯಾಗಿರುವುದರಿಂದ, ಅಲ್ಲಿ ಆ ಮಹಿಳೆಯ ಒಪ್ಪಿಗೆಗಿಂತ ಪತಿಯ ಒಪ್ಪಿಗೆಗೇ ಮಹತ್ವ. ಮದುವೆಯಾದ ಕೂಡಲೇ ಮಹಿಳೆಯ ಮೈ-ಮನ, ಸಮಸ್ತವೂ ಪತಿಯ ಸ್ವಾಧೀನಕ್ಕೆ ಬರುತ್ತದೆ. ಅವನ ಒಪ್ಪಿಗೆಯಿಲ್ಲದೇ ಯಾರಿಗೂ ಅದನ್ನು ತೆಗೆದುಕೊಳ್ಳಲು ಬರುವುದಿಲ್ಲ. ಪತಿ ಅವಳ ಮೈಯನ್ನು ಹೇಗೆ ಬೇಕಾದರೂ ಬಳಸಬಹುದು, ಹೊಡೆಯಬಹುದು, ಕೊಲ್ಲಲೂಬಹುದು. ಆದರೆ, ಪರ-ಪುರುಷ ಅದನ್ನು ಮುಟ್ಟಕೂಡದು. ಅವಳಿಗೆ ಸ್ವತಂತ್ರ ಅಸ್ತಿತ್ವವಿಲ್ಲದಿರುವುದರಿಂದ ಅವಳ ಒಪ್ಪಿಗೆಗೆ ಬೆಲೆಯಿಲ್ಲ, ಅವಳು ಅಪರಾಧಿಯೆನಿಸುವುದಿಲ್ಲ, ಅಪರಾಧಕ್ಕೆ ಬೆಂಬಲ ಕೊಟ್ಟವಳೂ ಆಗುವುದಿಲ್ಲ. ಒಬ್ಬನಿಗೆ ಸೇರಿದ ವಸ್ತುವೊಂದನ್ನು ಅವನ ಒಪ್ಪಿಗೆ ಇಲ್ಲದೇ ಇನ್ನೊಬ್ಬನು ತೆಗೆದುಕೊಂಡರೆ 'ಕಳ್ಳತನ'ದ ಅಪರಾಧವಾಗುವಂತೆ, ವ್ಯಭಿಚಾರವೂ ಕಳ್ಳತನದ ಇನ್ನೊಂದು ರೂಪವಾಗುತ್ತದೆ.

ಎರಡನೆಯದಾಗಿ, ವಿವಾಹಿತ ಮಹಿಳೆಯೊಂದಿಗೆ ಪರ-ಪುರುಷ ಲೈಂಗಿಕ ಸಂಬಂಧ ಹೊಂದುವುದು ಅಪರಾಧವೇ ಹೊರತು, ಪರಸ್ತ್ರೀಯೊಂದಿಗೆ ವಿವಾಹಿತ ಪುರುಷ ಲೈಂಗಿಕ ಸಂಬಂಧ ಹೊಂದುವುದು ಅಪರಾಧವಲ್ಲ. ಅಂತಹ ಸಂದರ್ಭದಲ್ಲಿ ಅವನ ಹೆಂಡತಿಯ ಸಂಬಂಧವಾಗಿ ಅದು ಅಪರಾಧವೆನಿಸುವುದಿಲ್ಲ. ಪತಿ ಸಂಬಂಧ ಬೆಳೆಸಿದ ಮಹಿಳೆ ವಿವಾಹಿತ ಮಹಿಳೆಯಾಗಿದ್ದರೆ ಆ ವಿವಾಹಿತ ಮಹಿಳೆಯ ಪತಿಗೆ ಅದು ಅಪರಾಧವೆನಿಸಿ ಅವನು ದೂರುಕೊಡಬಹುದೇ ಹೊರತು, ಆ ಪತಿಯ ಪತ್ನಿಗೆ ದೂರು ಕೊಡಲು ಬರುವುದಿಲ್ಲ, ಬೇಕಿದ್ದಲ್ಲಿ ಆ ಕಾರಣಕ್ಕೆ ವಿವಾಹ ವಿಚ್ಛೇದನ ಕೇಳಬಹುದು. ಆದರಿಂದ ಆ ಪತಿಗೆ ಅನುಕೂಲವೇ ಆಗುತ್ತದೆ. ಆದರೆ, ಪತಿ ಮಾತ್ರ ತನ್ನ ಹೆಂಡತಿ ವ್ಯಭಿಚಾರ ಮಾಡಿದ್ದರೆ, ಅವಳಿಗೆ ವಿಚ್ಛೇದನವನ್ನೂ ಕೊಡದೇ, ಅವಳ ಗೆಳೆಯನ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿ ಸೆರೆಮನೆಗೆ ಕಳಿಸಬಹುದಾಗಿದೆ. ತಾನು ಯಾರ ಭೀತಿಯೂ ಇಲ್ಲದೇ ಬೇಕಾದಷ್ಟು ಅವಿವಾಹಿತ ಮಹಿಳೆಯರೊಂದಿಗೆ ವ್ಯಭಿಚಾರದ ಸಂಬಂಧ ಹೊಂದಿರಬಹುದಾಗಿದೆ. ಅದನ್ನು ವಿರೋಧಿಸಿದ ಪತ್ನಿ ವಿಚ್ಛೇದನ ಪಡೆದು ಅವನ ಹಾದಿ ಸುಗಮ ಪಡಿಸಬಹುದಾಗಿದೆ.

ಒಂದು ಪ್ರಕರಣದಲ್ಲಿ, ಪತಿ ಬಹಳ ವರ್ಷಕಾಲ ವಿದೇಶದಲ್ಲಿ ಉಳಿದು ಒಂಟಿಯಾದ ಪತ್ನಿ ಭಾರತದಲ್ಲಿ ತನ್ನ ಸಹೋದ್ಯೋಗಿಯೊಂದಿಗೆ ಸ್ನೇಹಸಂಬಂಧ ಬೆಳೆದ ಕಾರಣದಿಂದಾಗಿ ಪತಿಗೆ ವಿಚ್ಛೇದನಕ್ಕೆ ಒಪ್ಪಿಗೆ ಕೊಡಲು ಕೇಳಿಕೊಂಡರೂ ಹಟದಿಂದ ಸೇಡಿನಭಾವದಿಂದ ಒಪ್ಪದೇ ಅವಳ ಸ್ನೇಹಿತನ ಮೇಲೆ ವ್ಯಭಿಚಾರದ ಆರೋಪಕ್ಕೆ ದೂರು

ಕೊಡುವುದಾಗಿ ಬೆದರಿಸಿ ಬಹಳ ಕಾಲ ಸತಾಯಿಸಿ, ಕೊನೆಗೆ ಅವಳು ಗರ್ಭಿಣಿ ಎಂದು ತಿಳಿದಾಗ ಎಲ್ಲಿ ಅದು ತನ್ನ ಮಗುವೆಂದಾಗುತ್ತದೋ ಎಂಬ ಭಯದಿಂದ ವಿಚ್ಛೇದನಕ್ಕೆ ಒಪ್ಪಿಗೆ ಕೊಡಲೇ ಬೇಕಾಗಿ ಬಂದು ಕೊನೆಗೂ ಅವಳು ಒಲ್ಲದ ವಿವಾಹ ಬಂಧನದಿಂದ ಹೊರಬಂದು ಗೌರವವಾಗಿ ತನ್ನ ಸ್ನೇಹಿತನೊಂದಿಗೆ ವಿವಾಹವಾಗಿ ಜೀವನವನ್ನು ಸರಿಪಡಿಸಿಕೊಳ್ಳಲು ಸಾಧ್ಯವಾಯಿತು. ಇಲ್ಲವಾದರೆ, ಸ್ನೇಹಿತ ಜೈಲಿಗೆ ಹೋಗಿ ಪತಿ ವಿದೇಶದಲ್ಲಿ ಉಳಿದು, ಅವಳು ತ್ರಿಶಂಕು ಸ್ಥಿತಿಯಲ್ಲಿ ಉಳಿಯಬೇಕಾಗುತ್ತಿತ್ತು. ಇಲ್ಲಿ ಪತಿ ಬೇಕಾದಷ್ಟು ಮಹಿಳೆಯರೊಂದಿಗೆ ಲೈಂಗಿಕ ಸಂಬಂಧ ಹೊಂದಿದ್ದರೂ ಪತ್ನಿಗೆ ಏನನ್ನೂ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಅಲ್ಲದೇ ವಿಚ್ಛೇದನಕ್ಕೆ ಹಾಕಿಕೊಂಡರೂ, ಪತಿಯ ವ್ಯಭಿಚಾರ ರುಜುವಾತು ಪಡಿಸುವುದು ಬಹಳ ಕಷ್ಟದ ಕೆಲಸ.

ಈ ಕಾನೂನನ್ನು ತಿದ್ದುಪಡಿ ಮಾಡುವಂತೆ ರಾಷ್ಟ್ರೀಯ ಕಾನೂನು ಆಯೋಗಗಳು ಶಿಫಾರಸ್ಸು ಮಾಡಿದರೂ, ಮಹಿಳಾ ಸಂಘ-ಸಂಸ್ಥೆಗಳು ಕೇಳುತ್ತಿದ್ದರೂ ಕೇಂದ್ರ ಸರ್ಕಾಗಳು ದಿವ್ಯ ಮೌನತಾಳಿವೆ.

ಅದೇ ರೀತಿ, 498ನೇ ಪ್ರಕರಣವೂ ವಿವಾಹಿತ ಮಹಿಳೆಯ ಬಗ್ಗೆ ಇದೆ. ಇಲ್ಲಿ ಲೈಂಗಿಕ ಸಂಬಂಧ ಇದ್ದಿರದಿದ್ದರೂ, ಆ ಉದ್ದೇಶದಿಂದ ವಿವಾಹಿತ ಮಹಿಳೆಯನ್ನು ಅವಳ ಪತಿಯ ಅಧೀನದಿಂದ ಅಥವಾ ಅವನ ಪರವಾಗಿ ಅವಳ ರಕ್ಷಕನಾಗಿರುವ ವ್ಯಕ್ತಿಯ ಅಧೀನದಿಂದ ಕರೆದೊಯ್ಯುವುದೇ ಅಪರಾಧವೆನಿಸುತ್ತದೆ ಅದಕ್ಕೆ ಎರಡು ವರ್ಷಗಳವರೆಗಿನ ಶಿಕ್ಷೆ ಇದೆ. ಇಲ್ಲಿಯೂ ಪುನಃ ಅವಳ ಒಪ್ಪಿಗೆ ಅಪ್ರಸ್ತುತವಾಗುತ್ತದೆ ಹಾಗೂ ಈ ಕೆಲಸಕ್ಕೆ ಸಹಾಯ ಮಾಡುವವರೂ ಅಪರಾಧಿಗಳಾಗುತ್ತಾರೆ.

494ನೇ ಪ್ರಕರಣವೂ ಇದಕ್ಕೆ ಸಂಬಂಧಿಸಿದೆ. ಈ ಪ್ರಕರಣ, ಮೊದಲನೇ ಗಂಡ ಹೆಂಡತಿ ಬದುಕಿದ್ದಾಗ ಇನ್ನೊಂದು ಮದುವೆಯಾಗುವುದನ್ನು ಅಪರಾಧವೆಂದು ಸಾರುತ್ತದೆ. ಗಂಡ ಮದುವೆಯಾಗದೇ ಹಾಗೆಯೆ ಉಪ-ಪತ್ನಿಯರನ್ನು ಹೊಂದಿದ್ದರೆ ಅದು ಅಪರಾಧವಾಗುವುದಿಲ್ಲ. ಅವನು ಅವರನ್ನು ಮನೆಯಲ್ಲಿ ತಂದಿಟ್ಟುಕೊಳ್ಳಬಹುದು. ಪತ್ನಿಗೆ ಅದು ಸಹನೆಯಾಗದಿದ್ದರೆ ವಿವಾಹ ವಿಚ್ಛೇದನ ಪಡೆದು ಅವನ ಹಾದಿ ಸುಗಮಗೊಳಿಸಬಹುದು. ಪತ್ನಿ ಅದೇ ಕೆಲಸ ಮಾಡಿದರೆ ಪತಿ ಆ ಪರ-ಪುರುಷನನ್ನು ಸೆರೆಮನೆಗೆ ಕಳುಹಿಸಿ ಮೀಸೆ ತಿರುವಬಹುದು. ಇದನ್ನೇ ಕಾನೂನಿನ ಪಳೆಯುಳಿಕೆ ಎನ್ನುವುದು. ವಿಕ್ಟೋರಿಯನ್ ಯುಗದ ಈ ಮೌಲ್ಯಗಳ ಪುನವಿಮರ್ಶೆ ನಡೆದು, 497 ಮತ್ತು 498ನೇ ಪ್ರಕರಣಗಳನ್ನು ತೆಗೆದು ಹಾಕಿ, 494ನೇ ಪ್ರಕರಣವನ್ನು ತಿದ್ದುಪಡಿ ಮಾಡುವ ಅವಶ್ಯಕತೆ ಬಹಳವಾಗಿದೆ. ಮಹಿಳೆ-ಪುರಷರಿಬ್ಬರಿಗೂ ವ್ಯಭಿಚಾರ ಕೇವಲ ವಿಚ್ಛೇದನದ ಕಾರಣವಾಗಬೇಕು ಅಥವಾ ಅಪರಾಧವಾದಲ್ಲಿ ಇಬ್ಬರ ಸಂಬಂಧವಾಗಿಯೂ ಅಪರಾಧವೆನಿಸಬೇಕು.

ನಿರ್ವಹಣಾ ಭತ್ಯೆ ಮತ್ತು ಮುಸ್ಲಿಂ ಮಹಿಳೆ

ಇತ್ತೀಚೆಗೆ ಕಲ್ಕತ್ತಾ ಹೈಕೋರ್ಟ್ ವಿಚ್ಛೇದಿತ ಮುಸ್ಲಿಂ ಮಹಿಳೆಗೆ ನಿರ್ವಹಣಾ ಭತ್ಯೆಯನ್ನು ಘೋಷಿಸುವುದರ ಮೂಲಕ ಹೊಸದೊಂದು ಹೆಜ್ಜೆಯಿಟ್ಟಿದೆ. ನ್ಯಾಯಮೂರ್ತಿ ಬಸುದೇವ ಪಾಣಿಗ್ರಾಹಿ ಈ ತೀರ್ಪನ್ನು ನೀಡುವುದರ ಮೂಲಕ ಮಹಿಳೆಯರ ಹಕ್ಕುಗಳಿಗೆ ಹೊಸದೊಂದು ಗರಿ ಮೂಡಿಸಿದ್ದಾರೆ.

ಸಕಿಲ ಪರ್ವೀನ್ 1993ರಲ್ಲಿಯೇ ತನ್ನ ಗಂಡ ಹೈದರ್ ಆಲಿಯಿಂದ ವಿಚ್ಛೇದಿತಳಾದಳು. ಆಗ ತಕ್ಷಣವೇ ಸಿಯಾಲ್ಡ ಕೋರ್ಟಿನಲ್ಲಿ ನಿರ್ವಹಣಾ ಭತ್ಯೆ ಕೋರಿ ಗಂಡನ ವಿರುದ್ಧ ಸಕಿಲ ಕೋರ್ಟಿನ ಮೊರೆ ಹೊಕ್ಕಳು. ಈ ಪಿಟೀಶನ್‌ನ ಪ್ರತಿಯನ್ನು ಶ್ರೀ ಹೈದರ್‌ಗೆ ನ್ಯಾಯಾಲಯವು ಕಳುಹಿಸಿಕೊಟ್ಟಾಗ ಹೈದರ್ ಆಗಲಿ, ಅವರ ವಕೀಲರಾಗಲೀ ಕೋರ್ಟಿನ ಮುಂದೆ ಹಾಜರಾಗಲಿಲ್ಲ. 1993ರ ಜುಲೈ 15ರಂದು ಟ್ರಯಲ್ ನ್ಯಾಯಾಲವು ಸಕೀನಾಳಿಗೆ ಮೂರು ತಿಂಗಳ ಕಾಲಕ್ಕೆ 800ರೂಗಳ ನಿರ್ವಹಣಾ ಭತ್ಯೆ ಮತ್ತು 2,500ರೂಗಳ ಮೆಹರ್ ಹಣವನ್ನು ನಿಗಧಿಪಡಿಸಿ ಆಜ್ಞೆ ಹೊರಡಿಸಿತು. ಈ ತೀರ್ಪಿನಿಂದ ಅಸಂತೃಪ್ತಳಾದ ಸಕಿನ ತೀರ್ಪಿನ ಪುನರ್ ಪರಿಶೀಲನೆಗಾಗಿ ಉಚ್ಚ ನ್ಯಾಯಾಲಾಯದ ಮೊರೆಹೊಕ್ಕಳು.

ಕಲ್ಕತ್ತಾ ಹೈಕೋರ್ಟಿನಲ್ಲಿ ಈ ಮೊಕದ್ದಮೆ ಬಂದಾಗ ನ್ಯಾಯಮೂರ್ತಿ ಪ್ರಾಣಿಗ್ರಾಹಿಯವರು ದೀರ್ಘವಾದ ನಡವಳಿಯನ್ನು ಆಲಿಸಿಯಾದ ಮೇಲೆ ಈ ಮೊಕದ್ದಮೆಗೆ ಸಂಬಂಧಪಟ್ಟ ಟ್ರಯಲ್ ಕೋರ್ಟಿನ ತೀರ್ಪನ್ನು ತಳ್ಳಿಹಾಕಿದರು. 1986ರ ಮುಸ್ಲಿಂ ಮಹಿಳೆಯರ ಕಾಯಿದೆಯಲ್ಲಿನ ಸವಲತ್ತುಗಳನ್ನು, ಅನುಕೂಲಗಳನ್ನು ಒಳಗೊಂಡಂತೆ ಈ ಕಾಯಿದೆಯನ್ನು ಉದಾರವಾಗಿ ರಚಿಸಬೇಕಿದೆ, ಎಂದು ಅಭಿಪ್ರಾಯಪಟ್ಟರು. ಅಲಹಾಬಾದ್ ಹೈಕೋರ್ಟಿನ 1994ರ ತೀರ್ಪನ್ನು ಉದ್ಧರಿಸಿ ಮುಸ್ಲಿಂ ಮಹಿಳೆಯರ ಕಾಯಿದೆಯ 125 (3) (ಸಿ) ವಿಭಾಗದ ಆಧಾರದ ಮೇಲೆ ನಿರ್ವಹಣಾ ಭತ್ಯೆಯನ್ನು ಪಡೆಯುವ ಹಕ್ಕನ್ನು 'ಇದ್ದತ್'ನ ಅವಧಿಗೆ ಮಾತ್ರ ಸೀಮಿತಗೊಳಿಸಬಾರದು ಎಂದು ಹೇಳಿದರು. ಕುಟುಂಬ ನ್ಯಾಯಾಲಯದಲ್ಲೂ ಈ ಬಗ್ಗೆ ಏನೂ ಹೇಳಿಲ್ಲ. ಆದ್ದರಿಂದ ಮುಸ್ಲಿಂ ಮಹಿಳೆ ಮರುಮದುವೆ ಯಾಗುವವರೆಗೂ ನಿರ್ವಹಣಾ ಭತ್ಯೆಯನ್ನು ಪಡೆಯಬಹುದು ಎಂದು ಚಾರಿತ್ರಿಕವಾಗಿ ಮಹತ್ವದ ತೀರ್ಪನ್ನು ಕೊಟ್ಟಿದ್ದಾರೆ.

ಮೆಕ್ಸಿಕೋದಿಂದ ನ್ಯೂಯಾರ್ಕಿಗೆ

ದೇವಕಿ ಜೈನ್

ಇದೇ ಜೂನ್ 4 ರಿಂದ 9 ರವರೆಗೆ ಮಹಿಳೆಯರು ಮತ್ತು ಸರ್ಕಾರದ ಪ್ರತಿನಿಧಿಗಳು ನ್ಯೂಯಾರ್ಕ್‌ನಲ್ಲಿ ಸಭೆ ಸೇರಿ 1995ರಲ್ಲಿ ಬೇಜಿಂಗ್ ಸಮಾವೇಶದಲ್ಲಿ ಕೈಗೊಂಡ ನಿರ್ಣಯಗಳು ಎಷ್ಟರ ಮಟ್ಟಿಗೆ ಮೂರ್ತಗೊಂಡಿವೆ, ಎಂಬುದನ್ನು ಪರಿಶೀಲಿಸಿ ಚರ್ಚಿಸಿದವು. ನಾನು 1975ರಲ್ಲಿ ನಡೆದ ಮೆಕ್ಸಿಕೋ ಸಮಾವೇಶದಿಂದ ಇತ್ತೀಚಿನ ನ್ಯೂಯರ್ಕ್ ಸಭೆಯವರೆಗೂ ಎಲ್ಲ ಕಾರ್ಯಕ್ರಗಳಲ್ಲೂ ಭಾಗವಹಿಸಿರುವೆ.

ಆರಂಭದ ಸಭೆಗಳಲ್ಲಿ ಭಾರತದ ಮಹಿಳಾ ಚಳುವಳಿಯ ಎಲ್ಲ ಅಂಗಗಳಲ್ಲೂ ಅದಮ್ಯ ಉತ್ಸಾಹವಿತ್ತು. ಎಪ್ಪತ್ತರ ದಶಕದಲ್ಲಿ ದುಡಿಯುವ ಮಹಿಳೆಯರ ಚಳುವಳಿಯು ಎಷ್ಟು ಉತ್ತುಂಗ ಶಿಖರದಲ್ಲಿತ್ತೋ ಹಾಗೆಯೇ ಸಾಂಪ್ರದಾಯಿಕ ಮಹಿಳಾ ಸಂಘಟನೆಗಳಾದ ಅಖಿಲಭಾರತ ಮಹಿಳಾ ಸಮಾವೇಶ, ಭಾರತೀಯ ಗ್ರಾಮೀಣ ಮಹಿಳಾ ಸಂಘ, ರಾಷ್ಟ್ರೀಯ ಮಹಿಳಾ ಫೆಡರೇಷನ್ ಮತ್ತು ಇನ್ನೂ ಕೆಲವು ಮಹಿಳಾ ಅಧ್ಯಯನ ಕೇಂದ್ರಗಳು ಅತ್ಯಂತ ಕ್ರಿಯಾಶೀಲವಾಗಿದ್ದವು. ಈ ಎಲ್ಲ ಸಂಘಟನೆಗಳೂ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದ್ದುದರಿಂದ ರಾಷ್ಟ್ರೀಯ ನೆಲೆಯಲ್ಲಿ ಒಂದಾಗಿ ವಿಶ್ವಸಮಾವೇಶದಲ್ಲಿ ಭಾಗವಹಿಸುವ ಅಥವಾ ರಾಷ್ಟ್ರೀಯ ನೆಲೆಯ ಪ್ರಚೋದನೆಯಿಂದ ಸ್ಥಳೀಯ ಸಂಘಟನೆಗೆ ಒಳಗಾಗುವ ಸಂದರ್ಭ ಬಲು ಕಡಿಮೆಯಾಗಿತ್ತು.

ಸಮಾನತೆಯ ಅಜೆಂಡಾ

ಬೀಜಿಂಗ್ ಸಮಾವೇಶದ ಸಂದರ್ಭದಲ್ಲಿ ರೂಪುಗೊಂಡಂತೆ ಸರ್ಕಾರದ ನೇತೃತ್ವದಲ್ಲಿ ದಸ್ತಾವೇಜನ್ನು ತಯಾರುಮಾಡುವಂತಹ ಪ್ರಕ್ರಿಯೆಗಳು ಈ ಸಂದರ್ಭದಲ್ಲಿ ಇರಲಿಲ್ಲ. ಆದರೂ ಒಟ್ಟಾರೆ ವಾತಾವರಣದಲ್ಲಿ ಸಂಭ್ರಮ ಉಲ್ಲಾಸಗಳು ಹೇರಳವಾಗಿದ್ದವು. ಸುಮಾರು 10,000ಕ್ಕೂ ಹೆಚ್ಚು ಮಹಿಳೆಯರು ಸೇರಿದ್ದ ಎನ್.ಜಿ.ಓ. ವೇದಿಕೆಯಲ್ಲಿ ಮಹಿಳೆಯರು ಜಗತ್ತಿನ ಪ್ರಖ್ಯಾತ ಅರ್ಥ ಶಾಸ್ತ್ರಜ್ಞರ ಭಾಷಣಗಳನ್ನು ಕೇಳುವುದರಲ್ಲಿ ಆಸಕ್ತರಾಗಿದ್ದರು. ದಕ್ಷಿಣ ಆಫ್ರಿಕಾದ ವರ್ಣಬೇಧ ನೀತಿಯ ವಿರುದ್ಧ ಗಟ್ಟಿಯಾದ ಪ್ರತಿಭಟನೆಯ ದನಿಗಳು ಮೇಲೆದ್ದಿದ್ದವು. ಪ್ಯಾಲೆಸ್ತೈನನ್ನು ಬೆಂಬಲಿಸುವ ದನಿಗಳು ಕಡಿಮೆಯಿರಲಲ್ಲಿ. ಭಾರತದ ಪ್ರತಿನಿಧಿಗಳಾಗಿ ಹೊರಟ ಮಹಿಳಾ ಸಮುದಾಯ ಮೆಕ್ಸಿಕೋದ ಹಳ್ಳಿಗಳಿಗೂ ತೆರಳಿ ಅಲ್ಲಿನ ಹುಲ್ಲುಗಾವಲುಗಳಲ್ಲಿ ಸಂಚರಿಸುವ ಅವಕಾಶ ಪಡೆದದ್ದು ಸಮಾವೇಶದಲ್ಲಿ ಪಾಲ್ಗೊಂಡಷ್ಟೇ ಮುಖ್ಯವಾಗಿತ್ತು. ಈ ಸಮಾವೇಶ ರಾಜಕೀಯ ಸ್ವರೂಪದ್ದಾಗಿದ್ದಷ್ಟೇ ಅಲ್ಲ, ವಿಶ್ವವ್ಯಾಪಿ ಮಹಿಳಾ ಚಳುವಳಿಗೆ ಭಾರಿ ಪ್ರೋತ್ಸಾಹ ಕೊಟ್ಟಿತ್ತು.

ಆಕರ್ಷಕ ಆರಂಭ

ಮೆಕ್ಸಿಕೋದಲ್ಲಿ ಆರಂಭವಾದ ಈ ಆಕರ್ಷಕ ಆರಂಭವು ನಂತರ ಒಂದು ದಶಕದ ಸಮಯದ ನಂತರ ನೈರೋಬಿಯಲ್ಲಿ ಮತ್ತೊಂದು ವಿಶ್ವ ಮಹಿಳಾ ಸಮಾವೇಶಕ್ಕೆ ಕಾರಣವಾಯಿತು. ಆದರೆ ಇವೆರಡರ ಮಧ್ಯೆ 1980ರಲ್ಲಿ ಕೋಪೆನ್ ಹೇಗನ್‌ನಲ್ಲಿ ಮಧ್ಯಂತರ ಮಹಿಳಾ ಸಮ್ಮೇಳನ ನಡೆದಿತ್ತು. ಮಹಿಳಾ ಸಂಘಟನೆಗಳು ತಮ್ಮ ರಚನೆಗಳನ್ನು ಜಾಗತಿಕ ನೆಲೆಯಲ್ಲಿ ಇನ್ನೂ ಹೆಚ್ಚು ಭದ್ರ ಪಡಿಸಿಕೊಳ್ಳಲು ನೈರೋಬಿ ಸಮಾವೇಶ ನೆರವು ನೀಡಿತು. ಈ ಎಲ್ಲದರ ಹಿನ್ನೆಲೆಯಲ್ಲಿ ಹೊಸ ಮಹಿಳಾ ಸಮುದಾಯವೊಂದು ಸಂಘಟಿತರಾದ, ಅಂತರರಾಷ್ಟ್ರೀಯ ವೇದಿಕೆಯಲ್ಲಿ ಚರ್ಚಿಸಬಲ್ಲ, ಅಪಾರ ಜ್ಞಾನ ಸಂಚಯ ಮಾಡಿಕೊಂಡಂತಹ ಸಮುದಾಯವೊಂದು ಹುಟ್ಟಿಕೊಂಡಿತು.

1985ರ ನೈರೋಬಿ ಮತ್ತು ಬೀಜಿಂಗ್ ಮಹಿಳಾ ಸಮಾವೇಶದ ನಡುವೆ ಒಂದು ಹೊಸ ಪಂಗಡದ ಮಹಿಳೆಯರೇ ಹುಟ್ಟಿಕೊಂಡರು. ಮಹಿಳಾ ಚಳುವಳಿಯಲ್ಲಿಯೇ ಅಧಿಕಾರಶಾಹಿ ಪ್ರಕ್ರಿಯೆಯೊಂದು ಹುಟ್ಟಿಕೊಂಡಿತು. ಇದರಿಂದಾಗಿ ಮಹಿಳೆಯರೂ ಕೂಡ ಕೆಲವೊಂದು ಸಂದರ್ಭಗಳಲ್ಲಿ ಸ್ತ್ರೀವಾದಿ ದೃಷ್ಟಿಕೋನದಿಂದ ಪರಿಸರ, ಮಾನವ ಹಕ್ಕುಗಳು, ಜನಸಂಖ್ಯೆ ಮುಂತಾದ ವಿಷಯಗಳನ್ನು ಕುರಿತು ಸಲಹೆ, ಸೂಚನೆಗಳನ್ನು ನೀಡುವ ಮತ್ತು ಚರ್ಚಿಸಬಲ್ಲ ಶಕ್ತಿ ಪಡೆದರು. ಹೀಗೆ ಮಹಿಳೆಯರು ಗಟ್ಟಿಗೊಳ್ಳುವ ಪ್ರಕ್ರಿಯೆಯಿಂದ ವಿಶಾಲ ವ್ಯಾಪ್ತಿಯಲ್ಲಿ ಮಹಿಳೆಯರ ಐಡೆಂಟಿಟಿಗಾಗಿ ದೀರ್ಘ ಯಾತ್ರೆಯನ್ನೇ ನಡೆಸಿದ್ದಾರೆ.

ಆದರೆ ಈ ಯಾತ್ರೆಯಲ್ಲಿ ಈ ಮಹಿಳೆಯರೊಂದಿಗೆ ಜೊತೆಗೂಡದೆ ಹಿಂದೆ ಬಿದ್ದ ಮಹಿಳೆಯರಿಗೆ ಈ ಸಮಾವೇಶಗಳಿಗೆ ಏನು ಅರ್ಥವಿದೆ?

ಇಂತಹ ಪ್ರಶ್ನೆಗಳು ಎತ್ತುವ ತಪ್ಪುಗಳು ಮತ್ತು ಕೊರೆಗಳು ವಿಶ್ವವ್ಯಾಪ್ತಿಯಾಗಿ ವಾಸ್ತವ ಸತ್ಯಗಳನ್ನು ನಮ್ಮ ಮುಂದೆ ತೆರೆದಿಡುತ್ತವೆ. ಇದಕ್ಕೆ ಉತ್ತಮ ನಿದರ್ಶನವೆಂದರೆ ಭಾರತ ಸರ್ಕಾರವು ಕೊಡುವ ಶಿಕ್ಷಣ ಮತ್ತು ಭಾರತದ ನ್ಯಾಯಾಂಗ ವ್ಯವಸ್ಥೆ. ಮಹಿಳೆ ಮತ್ತು ಮಕ್ಕಳ

ಇಲಾಖೆಯು ಮೇ 28ರಂದು ನೀಡಿದ ಜಾಹೀರಾತಿನಲ್ಲಿ ಮುಖವನ್ನು ಚೆನ್ನಾಗಿ ಹೊಡಿಸಿಕೊಂಡ ಮಹಿಳೆಯೊಬ್ಬಳ ಚಿತ್ರವಿತ್ತು. ಕೌಟುಂಬಿಕ ಹಿಂಸೆಯ ಕ್ರೌರ್ಯವನ್ನು ಬಹಿರಂಗವಾಗಿ ಸರ್ಕಾರವು ತೋರಿಸಿದ್ದೇ ಆದರ ಬದಲಾದ ದೃಷ್ಟಿಕೋನವನ್ನು ತೋರಿಸುತ್ತದೆ. ಕೆಲವು ವರ್ಷಗಳ ಹಿಂದೆ ಪವಿತ್ರವಾದ ಕೌಟುಂಬಿಕ ಬಂಧನದೊಳಗಿನ ಯಾವುದೇ ದೌರ್ಜನ್ಯವನ್ನು ಸರ್ಕಾರ ಹೀಗೆ ಬಹಿರಂಗವಾಗಿ ಜಾಹೀರು ಮಾಡುತ್ತಿರಲಿಲ್ಲ.

ಮತ್ತೊಂದು ಸಾಧನೆಯೆಂದರೆ ಮಹಿಳೆಯರ ಅಸ್ತಿತ್ವವು ಎಲ್ಲಲ್ಲೂ ಕಾಣಬರುತ್ತಿದೆ. ಅದು ದೌರ್ಜನ್ಯದ ಕಾರಣಕ್ಕಿರಬಹುದು, ಇಲ್ಲವೆ ಸಾಧನೆಯ ಮಾಲಿಕೆಯಾಗಿರಬಹುದು. ಮಹಿಳೆಯರ ಇರವು ಎಲ್ಲೆಲ್ಲೂ ಇದೆ. ಜಾಗತಿಕ ಮಹಿಳಾ ಸಮಾವೇಶಗಳು ಮತ್ತು ಅವುಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಈ ಪ್ರಕ್ರಿಯೆಯಿಂದಾಗಿ ಕ್ರೂರ ಸಂಪ್ರದಾಯಗಳು, ಕಾನೂನುಗಳು, ಕೆಲವು ಸಂಪ್ರದಾಯಸ್ಥ ದೇಶಗಳಲ್ಲಿನ ಮಹಿಳೆಯರ ದೌರ್ಜನ್ಯಗಳು ಜಗಜ್ಜಾಹೀರಾಗುತ್ತಿವೆ. ಭಾರತದಲ್ಲಂತೂ ವರದಕ್ಷಿಣೆ ಪ್ರಕರಣಗಳು ಕೌಟುಂಬಿಕ ದೌರ್ಜನ್ಯ, ಸ್ತ್ರೀಭ್ರೂಣಹತ್ಯೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ಈ ವಿಶ್ವಯಾತ್ರೆಗಳು ಈ ನಿಟ್ಟಿನಲ್ಲಿ ಏನೂ ಮಾಡುತ್ತಿವೆ?

ಸ್ವತಂತ್ರ ಹೋರಾಟ

ಇಂದು ಜಾಗತಿಕ ಮಹಿಳಾ ಚಳುವಳಿಯೂ ಸಾಂಪ್ರದಾಯಿಕ ಕಾರ್ಯ ಶೈಲಿಯನ್ನೇ ರೂಢಿಸಿಕೊಂಡಿದೆ. ಸರ್ಕಾರಗಳು ಬದಲಾವಣೆಯ ಹರಿಕಾರರಾಗುತ್ತಿದ್ದರೆ, ಮಹಿಳಾ ಚಳುವಳಿಗಳು ಪ್ರಗತಿಯನ್ನು ವರದಿ ಮಾಡುವ ವೇದಿಕೆಗಳಾಗಿ ತಮ್ಮ ಜವಾಬ್ದಾರಿಗಳಿಂದ ವಂಚಿತರಾಗುತ್ತಿದ್ದಾರೆ. ಆದ್ದರಿಂದಲೇ ರಾಷ್ಟ್ರೀಯ ನೆಲೆಯಲ್ಲಿ ಮಹಿಳಾ ಚಳುವಳಿಯೊಂದು ಒಟ್ಟಾರೆಯಾಗಿ ಕಾಣಬರುತ್ತಿಲ್ಲ. ಮಹಿಳೆಯರ ಸಾಮಾಜಿಕ ಸಂಘಟನೆಗಳೂ ಕೂಡ ಸ್ಥಳೀಯ ನೆಲೆಯ ಕಾರ್ಯಚಟುವಟಿಕೆಯಲ್ಲೇ ನಿರತವಾಗಿದೆ. ಉದಾಹರಣೆಗೆ ಆಂಧ್ರದ ಕುಡಿತದ ವಿರುದ್ಧದ ಚಳುವಳಿ ರಾಷ್ಟ್ರೀಯ ಚಳುವಳಿಯಾಗಲೇ ಇಲ್ಲ.

ಎಪ್ಪತ್ತರ ದಶಕದಲ್ಲಿ ರಾಷ್ಟ್ರೀಯ ವ್ಯಾಪ್ತಿಯ ಮಹಿಳಾ ಚಟುವಟಿಕೆಗಳು ಮಹಿಳೆಯರ ನಿಯಂತ್ರಣದಲ್ಲಿದ್ದವು. ಆದರೆ, ಇಂದು ಮಹಿಳೆಯರ ಸ್ಥಿತಿಯಲ್ಲಿ ಬದಲಾವಣೆಯೆನ್ನುವುದು ಒಟ್ಟಾರೆಯಾಗಿ ಅವಳನ್ನು ಕುರಿತ ಸಾಮಾಜಿಕ ನಂಬಿಕೆ, ಮೌಲ್ಯಗಳು ಜಾತಿ ವರ್ಗಭೇದಗಳನ್ನು ನಿವಾರಿಸಿಕೊಳ್ಳಬಲ್ಲ ಶಕ್ತಿ, ಎಲ್ಲವನ್ನು ಒಳಗೊಂಡಿರುತ್ತದೆ. ಹಾಗೆಯೇ ಚಲನಚಿತ್ರ ಮತ್ತು ಜಾಹೀರಾತುಗಳಲ್ಲಿ ಬಿತ್ತರವಾಗುವ ಮಹಿಳೆಯರನ್ನು ಕುರಿತ ಬದಲಾವಣೆಯೂ ಈ ಅಂಶದಲ್ಲಿ ಸೇರಿಸುತ್ತದೆ. ಇಂತಹ ದೀರ್ಘ ಬದಲಾವಣೆಯ ಹೋರಾಟದ ಹಾದಿ ಅತ್ಯಗತ್ಯವಾಗಿ ಬೇಕಾಗಿರುವುದು ರಾಜಕೀಯ ಸಂಘಟನಾಶಕ್ತಿ. ರಾಜಕೀಯವಾಗಿ ಮಹಿಳೆಯರು ಸಂಘಟಿತರಾಗಿ ಸರ್ಕಾರದ ಪ್ರಮುಖ ಸ್ಥಾನಗಳಲ್ಲಿ ಸೇರಬೇಕು.

ಈ ಜಗತ್ತಿನ ಚರಿತ್ರೆಯೆಲ್ಲವೂ ವೀರವನಿತೆಯರ ಮತ್ತು ಬಂಡಾಯಗಾರ್ತಿಯರ ಕತೆಯೇ ಆಗಿದೆ. ಅವರು ಈ ಶ್ರೇಣೀಕೃತ ವ್ಯವಸ್ಥೆಯನ್ನು, ತಾರತಮ್ಯ ನೀತಿಯನ್ನು ಮತ್ತು ಇಂತಹುದೇ ಮೌಲ್ಯ ವ್ಯವಸ್ಥೆಯನ್ನು ಪ್ರಶ್ನಿಸಿದವರೇ ಆಗಿದ್ದಾರೆ. ಈ ಇಪ್ಪತ್ತೈದು ವರ್ಷಗಳ ಮಹಿಳಾ ಚಳುವಳಿಯ ಹಾದಿಗೆ ಹೊಸ ಹುರುಪನ್ನು ತುಂಬ ಬಲ್ಲರು ಮತ್ತು ಅದರಿಂದಾಗಿ ವಿಶಾಲವಾದ ರಾಜಕೀಯ ಹೋರಾಟದ ಸ್ವರೂಪವೊಂದು ಮೂಡಿಬರಲಿದೆ.

ಕೃಪೆ
ಡೆಕನ್ ಹೆರಾಲ್ಡ್

ಅಂಜನಾ ವಿಶ್ರಾಗೆ ದೊರಕಿದ ವಿಜಯ

ಕೆಲವು ವರ್ಷಗಳ ಹಿಂದೆ ಸುದ್ದಿಯಲ್ಲಿದ್ದ ಅಂಜನಾಮಿಶ್ರಾಗೆ ಕಡೆಗೂ ನ್ಯಾಯ ದೊರಕಿದೆ. ಒರಿಸ್ಸಾದ ಮಾಜಿ ಅಕೌಂಟೆಂಟ್ ಜನರಲ್ ಇಂದ್ರಜಿತ್‌ರೇಗೆ ಸಿಬಿಐ ತನ್ನ ತನಿಖೆಯನಂತರ ಮೂರು ವರ್ಷಗಳ ಕಠಿಣ ಶಿಕ್ಷೆಯನ್ನು ನೀಡಿದೆ.

ಅಂಜನಾ ಮಿಶ್ರಳನ್ನು ತನ್ನ ಕಛೇರಿ ಮನೆಗೆ ಆಹ್ವಾನಿಸಿದ ಇಂದ್ರಜಿತ್ ರೇ ಅವಳ ಮೇಲೆ ಅತ್ಯಾಚಾರದ ಪ್ರಯತ್ನ ನಡೆಸಿದ್ದು ಈಗ ಇತಿಹಾಸ. ರೇ ವಿರುದ್ಧ ಅಂಜನಾ ಪೋಲೀಸರಿಗೆ ದೂರು ಕೊಟ್ಟಳು. ಆದರೆ ಒರಿಸ್ಸಾದ ಮುಖ್ಯಮಂತ್ರಿಗಳೇ ಸ್ವತಹ ಅಂಜನಾಳಿಗೆ ಹೊಂದಾಣಿಕೆ ಮಾಡಿಕೊಳ್ಳಲು ಕೇಳಿಕೊಂಡರು. ಈ ಸಲಹೆಯನ್ನು ತಿರಸ್ಕರಿಸಿದ ಅಂಜನಾಳಿಗೆ ಬದುಕನ್ನು ಎದುರಿಸಲಾಗದಂತೆ ಮಾಡಲಾಯಿತು. ಬೆದರಿಕೆಗಳು ಮೇಲಿಂದ ಮೇಲೆ ಅವಳನ್ನು ಹಣ್ಣು ಮಾಡಿತು. ಕೊನೆಗೆ 1999ರ ಜನವರಿಯಂದು ತನ್ನ ವಕೀಲರನ್ನು ನೋಡಲು ಪ್ರಯಾಣಿಸುತ್ತಿದ್ದಾಗ ದಾರಿಯಲ್ಲಿ ಅವಳನ್ನು ತಡೆದು ಅವಳ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಲಾಯಿತು. ಈ ಎಲ್ಲ ಅಡ್ಡಿ ಆತಂಕಗಳನ್ನು ಎದುರಿಸಿ ಹೋರಾಟ ನಡೆಸಿದ ಅಂಜನಾ ಮಿಶ್ರಾಗೆ ಈಗ ಸಿಬಿಐ ತನಿಖೆ ನೀಡಿದ ತೀರ್ಪು ಕೊಂಚವಾದರೂ ಸಮಧಾನ ತಂದಿದೆ.

ಹೆಣ್ಣಿನೊಂದಿಗೆ ಹೆಣ್ಣಿನ ಮದುವೆ

- ಎಸ್. ಮಾಲತಿ

22-4-2000ದಂದು ಜರ್ಮನಿಯಲ್ಲಿ ಕ್ರಿಸ್ಟಿನಾ ಮೊರಾಲ್ ಮತ್ತು ಫ್ರಾನ್ಸಿಸ್ಕಾ ಸೋಲರ್ ಮದುವೆ ಮಾಡಿಕೊಂಡರು. ಇವರ ಹಳ್ಳಿಯ ಮೇಯರ್, ಇವರ ಮದುವೆ ನೆರವೇರಿಸಿದ.

ಹೆಣ್ಣು ಹೆಣ್ಣನ್ನು ವರಿಸುವುದು, ಗಂಡು ಗಂಡನ್ನು ವರಿಸುವುದು ಇದು ಆಧುನಿಕ ಸಮಾಜದ ವೈಪರೀತ್ಯಗಳಲ್ಲೊಂದು. ಹೆಣ್ಣಿನೊಂದಿಗೆ ಹೆಣ್ಣೇ ದೈಹಿಕ ಸಂಬಂಧ ಹೊಂದಿದಾಗ, ಅವರನ್ನು ಲೆಸ್ಬಿಯನ್ಸ್ ಎಂದೂ, ಗಂಡಿನೊಂದಿಗೆ ಗಂಡೇ ಲೈಂಗಿಕ ಸಂಬಂಧ ಹೊಂದಿದಾಗ, ಅವರನ್ನು ಹೋಮೋ ಸೆಕ್ಷುಯಲ್ಸ್ ಎಂದೂ ಕರೆಯುತ್ತಾರೆ.

ಇದಕ್ಕೆ ಮೂಲ ಕಾರಣ-ಪುರುಷರಲ್ಲಿರುವ ಸ್ತ್ರೀ ದ್ವೇಷ ಹಾಗೂ ಸ್ತ್ರೀಯರಲ್ಲಿರುವ ಪುರುಷದ್ವೇಷ. ಕೆಲವೊಮ್ಮೆ ಬೇರೆ ಲಿಂಗದ ಜೊತೆ ಬೆರೆಯಲಾರದ ಸಂಕೋಚಗಳೂ ಇರಬಹುದು. ಗಂಡು ಹೆಣ್ಣನ್ನು, ಹೆಣ್ಣು ಗಂಡನ್ನು ಆಕರ್ಷಿಸುವುದು, ಬೆರೆಯಲು ಹಾತೊರೆಯುವುದು ಪ್ರಕೃತಿ ನಿಯಮ. ಆದರೆ, ಈ ಮೇಲಿನ ವೈಪರೀತ್ಯ ನಮ್ಮನ್ನು ಬೆಚ್ಚಿ ಬೀಳಿಸುತ್ತದೆ.

ಒಮ್ಮೆ 'ಇಂಡಿಯಾ ಟುಡೇ' ಪತ್ರಿಕೆಯಲ್ಲಿ ನಮ್ಮ ನಗರ ಪ್ರದೇಶಗಳಲ್ಲಿರುವ ಹಲವು ಲೆಸ್ಬಿಯನ್ ಯುವತಿ ಜೋಡಿಗಳ ಸಂದರ್ಶನ ಫೋಟೋ ಸಮೇತ ಅಚ್ಚಾಗಿತ್ತು. ಅವರೆಲ್ಲರೂ ತಮ್ಮ ಜೀವನ ವಿಧಾನವನ್ನು ಸಮರ್ಥಿಸಿಕೊಂಡಿದ್ದರು.

ಈ ಒಂದು ಅತಿರೇಕದ ಉಚಿತಾನುಚಿತಗಳು ಏನೇ ಇರಲಿ ನಿಮಗೊಂದು ಇಂಟರೆಸ್ಟಿಂಗ್ ಘಟನೆ ಹೇಳುತ್ತೇನೆ....

ಸುಮಾರು 1986-87ರ ಸಮಯ. ಆಗ ನಾನು ಬೊಂಬಾಯಿ ನೆಹರೂ ಸೆಂಟರ್‌ನಲ್ಲಿ ಭಾರತೀಯ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆ ಎಂಬ ಟಿ.ವಿ. ಸೀರಿಯಲ್ ಒಂದಕ್ಕೆ ಕಲಾನಿರ್ದೇಶಕಿಯಾಗಿ ಕೆಲಸ ಮಾಡುತ್ತಿದ್ದೆ. ಈ ಇಡೀ ಪ್ರಾಜೆಕ್ಟ್‌ನ ನಿರ್ದೇಶಕಿ - ಚಂದಿತಾ ಮುಖರ್ಜಿ ಎನ್ನುವವರು. ಸುಮಾರ 10 ಜನ ಕೆಲಸ ಮಾಡುತ್ತಿದ್ದ ಆ ಪ್ರಾಜೆಕ್ಟ್‌ನಲ್ಲಿ 9 ಜನ ಮಹಿಳೆಯರೇ ಇದ್ದರು. ಅವರಲ್ಲೊಬ್ಬಳು ಆರ್ಕಿಟೆಕ್ಟ್ - ಆರತಿ ರೇಗೆ. ಮೊದಲ ದಿನದ ಭೇಟಿಯಲ್ಲೇ ಈ ಆರತಿ ಸ್ವಲ್ಪ ವಿಚಿತ್ರದವಳು ಎನ್ನಿಸಿತ್ತು. ನಾನು ಅದರ ಕಡೆ ಅಷ್ಟೇನೂ ಗಮನ ಹರಿಸಲಿಲ್ಲ. ಆದರೆ, ಆಕೆಗೆ ನನ್ನನ್ನು ಕಂಡರೆ ಅದೇನೋ ಅಕ್ಕರೆ. ತನ್ನ ಟೇಬಲ್ಲಿನಿಂದ ನನ್ನ ಟೇಬಲ್ಲಿಗೆ ಬಂದು ಆಗ ಮಾತನಾಡಿಸುವಳು - ಆಕೆ ಜಾಣೆ. ಆದರೆ, ಆಕೆ ನನ್ನ ಭುಜಗಳನ್ನು, ಎದೆಯನ್ನು ಕಣ್ಣುಗಳಲ್ಲಿ ನಿಟ್ಟಿಸಿ ನೋಡುವುದರಲ್ಲಿ ಏನೋ ಒಂದು ವೈಚಿತ್ರ್ಯವಿತ್ತು...ಒಮ್ಮೊಮ್ಮೆ ಮುಜುಗರ ಉಂಟಾಗುತ್ತಿತ್ತು. ಆಕೆ ಒಮ್ಮೆ ನನ್ನನ್ನು ತನ್ನ ಮನೆಗೆ ಊಟಕ್ಕೆ ಕರೆದಳು. ಈ ವಿಷಯ ನಿರ್ದೇಶಕಿ ಚಂದಿತಾಗೆ ತಿಳಿದಾಗ ಆಕೆ, 'ಅಲ್ಲಿಗೆ ಹೋಗಬೇಡ, ಆಕೆ ಲೆಸ್ಬಿಯನ್' ಎಂಬ ಎಚ್ಚರಿಕೆ ಕೊಟ್ಟಳು. ಆದರೆ ಆರತಿಯ ಆಮಂತ್ರಣವನ್ನು ತಿರಸ್ಕರಿಸಲಾಗದೆ ನಾನು ಅವಳ ಮನೆಗೆ ಹೋದೆ.

ಆರತಿ ಬಹಳ ಒಳ್ಳೆಯ ಅಡುಗೆ ಮಾಡಿದ್ದಳು. ಪ್ರೀತಿಯಿಂದ ಬಡಿಸಿದಳು. ಊಟದ ನಂತರ ಮಾತುಕತೆಗೆ ತೊಡಗಿದೆವು. ಆರತಿ ತನ್ನೆಲ್ಲ ಕಥೆಯನ್ನು ಬಿಚ್ಚಿಟ್ಟಳು... ಆರತಿ ಗಂಡ ಯಾವುದೋ ಕಾಲೇಜಿನಲ್ಲಿ ಅಧ್ಯಾಪಕ... ಈಗ ಅವರು ಜೊತೆಗಿಲ್ಲ... ವಿವಾಹ ವಿಚ್ಛೇದನವಾಗಿದೆ. ಆರತಿಗೆ ಕೇತಕಿ, ಕೇಯಾ ಎಂಬ ಸುಂದರವಾದ ಎರಡು ಅವಳಿ ಹೆಣ್ಣು ಮಕ್ಕಳಿವೆ. ಗಂಡನ ಜೊತೆಗೆ ಹಲವಾರು ವರ್ಷಗಳಿದ್ದಳು. ಆತ ಒಬ್ಬ ಸ್ಯಾಡಿಸ್ಟ್...ಆರತಿಗೆ ಅತಿಯಾದ ಮಾಸಿಕ, ದೈಹಿಕ ಹಿಂಸೆ ಕೊಟ್ಟಿದ್ದಾನೆ. ಆರತಿಯಲ್ಲಿ ಈಗ ಪುರುಷದ್ವೇಷ ತುಂಬಿದೆ. ಆದರೆ, ಅದರಿಂದ ಆಕೆ ಒಂಟಿಯಾಗಿ ಬದುಕುವ ನಿರ್ಧಾರ ತೆಗೆದುಕೊಂಡಿಲ್ಲ. ಆಕೆಗೊಬ್ಬ ಸಖಿ-ಗೆಳತಿಯಿದ್ದಾಳೆ. ಅವಳೇ ಸಕೀನಾ ಒಬ್ಬ ಮುಸ್ಲಿಂ ಹುಡುಗಿ...ಬಡವೆ...ಓದಿಗಾಗಿ ಬೊಂಬಾಯಿಯಲ್ಲಿದ್ದಾಳೆ... ಆರತಿ ಆಕೆಗೆ ಆಶ್ರಯ ಕೊಟ್ಟಿದ್ದಾಳೆ. ಅಷ್ಟೇ ಅಲ್ಲ, ಸಕೀನಾ ಆಕೆಯ ಹಾಸಿಗೆಯ ಸಂಗಾತಿ.

ಆರತಿ ನನಗೆ ಲೆಸ್ಬಿಯನಿಸಂ ಬಗ್ಗೆ ದೀರ್ಘವಾದ ಭಾಷಣವನ್ನೇ ಕೊಟ್ಟಳು. ಆರತಿ ಸಾಮಾನ್ಯ ಹೆಂಗಸಲ್ಲ... ಪ್ರಖ್ಯಾತ ಆರ್ಕಿಟೆಕ್ಟ್-ಇಂಟರೀಯರ್ ಡೆಕೋರೇಟರ್ ಮಹಿಳಾ ಚಳುವಳಿಯ ಸಕ್ರಿಯ ಕಾರ್ಯಕರ್ತೆ - ಸಿನಿಮಾ, ನಾಟಕ, ಸಾಹಿತ್ಯಗಳಲ್ಲಿ ತೀವ್ರ ಆಸಕ್ತಿಯಿರುವವಳು. ಆಕೆ ಮರಾಠಿಯ ಪ್ರಖ್ಯಾತ ನಾಟಕ 'ಕಸ್ತೂರಿ ಮೃಗ'ದ ಬಗ್ಗೆ ಮಾತು ಆರಂಭಿಸಿದಳು... 'ಆ ನಾಟಕದಲ್ಲಿ ಹೇಳುವ ಹಾಗೆ ಪ್ರತಿ ಹೆಣ್ಣು ಕಸ್ತೂರಿ ಮೃಗದಂತೆ · ತನ್ನ ಹೊಕ್ಕಳಿನಲ್ಲೇ ಸುಗಂಧ ದ್ರವ್ಯವನ್ನಿರಿಸಿಕೊಂಡು, ಸುವಾಸನೆಗಾಗಿ ಓಡುತ್ತ ಓಡುತ್ತ ಎಲ್ಲಿದೆಯೆಂದು ಹುಡುಕುತ್ತಾ ವಿವಶಳಾಗುತ್ತಾಳೆ... ಹೀಗೆಯೇ ಹೆಣ್ಣು ಪುರುಷನ ಹಿಂದೆ ಓಡುತ್ತಾಳೆ.. ಆಕೆ ಹಾಗೆ ಅವನನ್ನು ಹಿಂಬಾಲಿಸಬೇಕಿಲ್ಲ....ಎಲ್ಲವೂ ಆವಳಲ್ಲಿಯೇ ಇದೆ... ಅವಳು ಸ್ವಯಂಪೂರ್ಣಳು...' ಹೀಗೆ ಆವೇಶದಲ್ಲಿ ಮಾತಾಡಿದಳು.

ಅನಂತರ, ಲೆಸ್ಬಿಯನಿಸಂ ಹೇಗೆ ಎಲ್ಲಕ್ಕಿಂತ ಒಳ್ಳೆಯ

ಹೆಣ್ಣಿನೊಂದಿಗೆ ಹೆಣ್ಣಿನ ಮದುವೆ

- ಎಸ್. ಮಾಲತಿ

22-4-2000ದಂದು ಜರ್ಮನಿಯಲ್ಲಿ ಕ್ರಿಸ್ಟಿನಾ ಮೊರಾಲ್ ಮತ್ತು ಫ್ರಾನ್ಸಿಸ್ಕಾ ಸೋಲಲರ್ ಮದುವೆ ಮಾಡಿಕೊಂಡರು. ಇವರ ಹಳ್ಳಿಯ ಮೇಯರ್, ಇವರ ಮದುವೆ ನೆರವೇರಿಸಿದ.

ಹೆಣ್ಣು ಹೆಣ್ಣನ್ನು ವರಿಸುವುದು, ಗಂಡು ಗಂಡನ್ನು ವರಿಸುವುದು ಇದು ಆಧುನಿಕ ಸಮಾಜದ ವೈಪರೀತ್ಯಗಳಲ್ಲೊಂದು. ಹೆಣ್ಣಿನೊಂದಿಗೆ ಹೆಣ್ಣೇ ದೈಹಿಕ ಸಂಬಂಧ ಹೊಂದಿದಾಗ, ಅವರನ್ನು ಲೆಸ್ಬಿಯನ್ಸ್ ಎಂದೂ, ಗಂಡಿನೊಂದಿಗೆ ಗಂಡೇ ಲೈಂಗಿಕ ಸಂಬಂಧ ಹೊಂದಿದಾಗ, ಅವರನ್ನು ಹೋಮೋ ಸೆಕ್ಷುಯಲ್ಸ್ ಎಂದೂ ಕರೆಯುತ್ತಾರೆ.

ಇದಕ್ಕೆ ಮೂಲ ಕಾರಣ-ಪುರುಷರಲ್ಲಿರುವ ಸ್ತ್ರೀ ದ್ವೇಷ ಹಾಗೂ ಸ್ತ್ರೀಯರಲ್ಲಿರುವ ಪುರುಷದ್ವೇಷ. ಕೆಲವೊಮ್ಮೆ ಬೇರೆ ಲಿಂಗದ ಜೊತೆ ಬೆರೆಯಲಾರದ ಸಂಕೋಚಗಳೂ ಇರಬಹುದು. ಗಂಡು ಹೆಣ್ಣನ್ನು, ಹೆಣ್ಣು ಗಂಡನ್ನು ಆಕರ್ಷಿಸುವುದು, ಬೆರೆಯಲು ಹಾತೊರೆಯುವುದು ಪ್ರಕೃತಿ ನಿಯಮ. ಆದರೆ, ಈ ಮೇಲಿನ ವೈಪರೀತ್ಯ ನಮ್ಮನ್ನು ಬೆಚ್ಚಿ ಬೀಳಿಸುತ್ತದೆ.

ಒಮ್ಮೆ 'ಇಂಡಿಯಾ ಟುಡೇ' ಪತ್ರಿಕೆಯಲ್ಲಿ ನಮ್ಮ ನಗರ ಪ್ರದೇಶಗಳಲ್ಲಿರುವ ಹಲವು ಲೆಸ್ಬಿಯನ್ ಯುವತಿ ಜೋಡಿಗಳ ಸಂದರ್ಶನ ಫೋಟೋ ಸಮೇತ ಅಚ್ಚಾಗಿತ್ತು, ಅವರೆಲ್ಲರೂ ತಮ್ಮ ಜೀವನ ವಿಧಾನವನ್ನು ಸಮರ್ಥಿಸಿಕೊಂಡಿದ್ದರು.

ಈ ಒಂದು ಅತಿರೇಕದ ಉಚಿತಾನುಚಿತಗಳು ಏನೇ ಇರಲಿ ನಿಮಗೊಂದು ಇಂಟರೆಸ್ಟಿಂಗ್ ಘಟನೆ ಹೇಳುತ್ತೇನೆ....

ಸುಮಾರು 1986-87ರ ಸಮಯ. ಆಗ ನಾನು ಬೊಂಬಾಯಿ ನೆಹರೂ ಸೆಂಟರ್‌ನಲ್ಲಿ ಭಾರತೀಯ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆ ಎಂಬ ಟಿ.ವಿ. ಸೀರಿಯಲ್ ಒಂದಕ್ಕೆ ಕಲಾನಿರ್ದೇಶಕಿಯಾಗಿ ಕೆಲಸ ಮಾಡುತ್ತಿದ್ದೆ. ಈ ಇಡೀ ಪ್ರಾಜೆಕ್ಟ್‌ನ ನಿರ್ದೇಶಕಿ - ಚಂದಿತಾ ಮುಖರ್ಜಿ ಎನ್ನುವವರು. ಸುಮಾರ 10 ಜನ ಕೆಲಸ ಮಾಡುತ್ತಿದ್ದ ಆ ಪ್ರಾಜೆಕ್ಟ್‌ನಲ್ಲಿ 9 ಜನ ಮಹಿಳೆಯರೇ ಇದ್ದರು. ಅವರಲ್ಲೊಬ್ಬಳು ಆರ್ಕಿಟೆಕ್ಟ್ - ಆರತಿ ರೇಗೆ. ಮೊದಲ ದಿನದ ಭೇಟಿಯಲ್ಲೇ ಈ ಆರತಿ ಸ್ವಲ್ಪ ವಿಚಿತ್ರದವಳು ಎನ್ನಿಸಿತ್ತು. ನಾನು ಅದರ ಕಡೆ ಅಷ್ಟೇನೂ ಗಮನ ಹರಿಸಲಿಲ್ಲ. ಆದರೆ, ಆಕೆಗೆ ನನ್ನನ್ನು ಕಂಡರೆ ಅದೇನೋ ಅಕ್ಕರೆ. ತನ್ನ ಟೇಬಲ್ಲಿನಿಂದ ನನ್ನ ಟೇಬಲ್ಲಿಗೆ ಬಂದು ಆಗ ಮಾತನಾಡಿಸುವಳು - ಆಕೆ ಜಾಣೆ. ಆದರೆ, ಆಕೆ ನನ್ನ ಭುಜಗಳನ್ನು, ಎದೆಯನ್ನು ಕಣ್ಣುಗಳಲ್ಲಿ ನಿಟ್ಟಿಸಿ ನೋಡುವುದರಲ್ಲಿ ಏನೋ ಒಂದು ವೈಚಿತ್ರ್ಯವಿತ್ತು...ಒಮ್ಮೊಮ್ಮೆ ಮುಜುಗರ ಉಂಟಾಗುತ್ತಿತ್ತು. ಆಕೆ ಒಮ್ಮೆ ನನ್ನನ್ನು ತನ್ನ ಮನೆಗೆ ಊಟಕ್ಕೆ ಕರೆದಳು. ಈ ವಿಷಯ ನಿರ್ದೇಶಕಿ ಚಂದಿತಾಗೆ ತಿಳಿದಾಗ ಆಕೆ, 'ಅಲ್ಲಿಗೆ ಹೋಗಬೇಡ, ಆಕೆ ಲೆಸ್ಬಿಯನ್' ಎಂಬ ಎಚ್ಚರಿಕೆ ಕೊಟ್ಟಳು. ಆದರೆ ಆರತಿಯ ಆಮಂತ್ರಣವನ್ನು ತಿರಸ್ಕರಿಸಲಾಗದೆ ನಾನು ಅವಳ ಮನೆಗೆ ಹೋದೆ.

ಆರತಿ ಬಹಳ ಒಳ್ಳೆಯ ಅಡುಗೆ ಮಾಡಿದ್ದಳು. ಪ್ರೀತಿಯಿಂದ ಬಡಿಸಿದಳು. ಊಟದ ನಂತರ ಮಾತುಕತೆಗೆ ತೊಡಗಿದೆವು. ಆರತಿ ತನ್ನೆಲ್ಲ ಕಥೆಯನ್ನು ಬಿಚ್ಚಿಟ್ಟಳು... ಆರತಿ ಗಂಡ ಯಾವುದೋ ಕಾಲೇಜಿನಲ್ಲಿ ಅಧ್ಯಾಪಕ... ಈಗ ಅವರು ಜೊತೆಗಿಲ್ಲ... ವಿವಾಹ ವಿಚ್ಛೇದನವಾಗಿದೆ. ಆರತಿಗೆ ಕೇತಕಿ, ಕೇಯಾ ಎಂಬ ಸುಂದರವಾದ ಎರಡು ಅವಳಿ ಹೆಣ್ಣು ಮಕ್ಕಳಿವೆ. ಗಂಡನ ಜೊತೆಗೆ ಹಲವಾರು ವರ್ಷಗಳಿದ್ದಳು. ಆತ ಒಬ್ಬ ಸ್ಯಾಡಿಸ್ಟ್...ಆರತಿಗೆ ಅತಿಯಾದ ಮಾನಸಿಕ, ದೈಹಿಕ ಹಿಂಸೆ ಕೊಟ್ಟಿದ್ದಾನೆ. ಆರತಿಯಲ್ಲಿ ಈಗ ಪುರುಷದ್ವೇಷ ತುಂಬಿದೆ. ಆದರೆ, ಅದರಿಂದ ಆಕೆ ಒಂಟಿಯಾಗಿ ಬದುಕುವ ನಿರ್ಧಾರ ತೆಗೆದುಕೊಂಡಿಲ್ಲ. ಆಕೆಗೊಬ್ಬ ಸಖಿ-ಗೆಳತಿಯಿದ್ದಾಳೆ. ಅವಳೇ ಸಕೀನಾ ಒಬ್ಬ ಮುಸ್ಲಿಂ ಹುಡುಗಿ...ಬಡವೆ...ಓದಿಗಾಗಿ ಬೊಂಬಾಯಿಯಲ್ಲಿದ್ದಾಳೆ... ಆರತಿ ಆಕೆಗೆ ಆಶ್ರಯ ಕೊಟ್ಟಿದ್ದಾಳೆ. ಅಷ್ಟೇ ಅಲ್ಲ, ಸಕೀನಾ ಆಕೆಯ ಹಾಸಿಗೆಯ ಸಂಗಾತಿ.

ಆರತಿ ನನಗೆ ಲೆಸ್ಬಿಯನಿಸಂ ಬಗ್ಗೆ ದೀರ್ಘವಾದ ಭಾಷಣವನ್ನೇ ಕೊಟ್ಟಳು. ಆರತಿ ಸಾಮಾನ್ಯ ಹೆಂಗಸಲ್ಲ... ಪ್ರಖ್ಯಾತ ಆರ್ಕಿಟೆಕ್ಟ್-ಇಂಟರೀಯರ್ ಡೆಕೋರೇಟರ್ ಮಹಿಳಾ ಚಳುವಳಿಯ ಸಕ್ರಿಯ ಕಾರ್ಯಕರ್ತೆ - ಸಿನಿಮಾ, ನಾಟಕ, ಸಾಹಿತ್ಯಗಳಲ್ಲಿ ತೀವ್ರ ಆಸಕ್ತಿಯಿರುವವಳು. ಆಕೆ ಮರಾಠಿಯ ಪ್ರಖ್ಯಾತ ನಾಟಕ 'ಕಸ್ತೂರಿ ಮೃಗ'ದ ಬಗ್ಗೆ ಮಾತು ಆರಂಭಿಸಿದಳು... 'ಆ ನಾಟಕದಲ್ಲಿ ಹೇಳುವ ಹಾಗೆ ಪ್ರತಿ ಹೆಣ್ಣು ಕಸ್ತೂರಿ ಮೃಗದಂತೆ · ತನ್ನ ಹೊಕ್ಕಳಿನಲ್ಲೇ ಸುಗಂಧ ದ್ರವ್ಯವನ್ನಿರಿಸಿಕೊಂಡು, ಸುವಾಸನೆಗಾಗಿ ಓಡುತ್ತ ಓಡುತ್ತ ಎಲ್ಲಿದೆಯೆಂದು ಹುಡುಕುತ್ತಾ ವಿವಶಳಾಗುತ್ತಾಳೆ... ಹೀಗೆಯೇ ಹೆಣ್ಣು ಪುರುಷನ ಹಿಂದೆ ಓಡುತ್ತಾಳೆ.. ಆಕೆ ಹಾಗೆ ಅವನನ್ನು ಹಿಂಬಾಲಿಸಬೇಕಿಲ್ಲ....ಎಲ್ಲವೂ ಅವಳಲ್ಲಿಯೇ ಇದೆ... ಅವಳು ಸ್ವಯಂಪೂರ್ಣಳು...' ಹೀಗೆ ಆವೇಶದಲ್ಲಿ ಮಾತಾಡಿದಳು.

ಅನಂತರ, ಲೆಸ್ಬಿಯನಿಸಂ ಹೇಗೆ ಎಲ್ಲಕ್ಕಿಂತ ಒಳ್ಳೆಯ

ವಿಮುಕ್ತಿಯ ದಾರಿ ಹೆಣ್ಣಿಗೆ ಎಂಬುದನ್ನು ಹೇಳುವಂತಹ ಪುಸ್ತಕಗಳ ರಾಶಿಯನ್ನೇ ನನ್ನೆದುರು ಹರಡಿದಳು. ನಾನೂ ವಿಚ್ಛೇದನ ಹೊಂದಿದ ಒಂಟಿ ಹೆಂಗಸು ಎಂಬುದು ಅವಳಲ್ಲಿ ಇನ್ನೂ ಹೆಚ್ಚಿನ ಶಕ್ತಿಯನ್ನು ತುಂಬಿತ್ತು...ನಾನು ಮೌನವಾಗಿ ಕೇಳುತ್ತಿದ್ದೆ.

ಅನಂತರ, ಒಂಟಿ ಹೆಣ್ಣಿನ ನೋವುಗಳನ್ನು ತನ್ನ ಹಾಡುಗಳಲ್ಲಿ ಹರಿಸಿದ ಬೇಗಂ ಅಖ್ತರ್‌ಳ ಗಜಲ್‌ಗಳನ್ನು ರೆಕಾರ್ಡರ್‌ಗೆ ಹಾಕಿ ನನಗೆ ಕೇಳಿಸಿದಳು. ಅಲ್ಲೊಂದು ನಶೆತುಂಬಿದ, ಅದೇ ಸತ್ಯವೇನೋ ಎಂಬಂತಹ ಭಾವುಕ ವಾತಾವರಣ ಸೃಷ್ಟಿಯಾಗಿತ್ತು, ಆರತಿಯ ನೋವು ನನ್ನನ್ನು ತಟ್ಟಿತು. ಆದರೆ, ಸಕೀನಾಳಂಥಹ ಎಳೆಹುಡುಗಿಯನ್ನು ಇವಳು ಹೆಂಡತಿಯಂತೆ ಬಳಸುವುದರಲ್ಲಿ, ಆ ಮೌನಿ ಸಕೀನಾಳ ಅಭಿಪ್ರಾಯ ಏನಿರಬಹುದು ಎಂಬ ಅನುಮಾನ ಮೂಡಿತು. ನನ್ನ ಮನಸ್ಸು ಅದನ್ನು ಒಪ್ಪಲು ತಯಾರಿರಲಿಲ್ಲ.

ಅನಂತರ, ಆರತಿ...ಹೆಂಗಸರು ಹೆಂಗಸರೊಂದಿಗೆ ದೈಹಿಕವಾಗಿ ಹೇಗೆ ಸಂಬಂಧಹೊಂದಬೇಕು, ಲೈಂಗಿಕ ಸುಖವನ್ನು ಹೇಗೆ ಪಡೆಯಬೇಕು ಎಂಬುದರ ಬಗ್ಗೆ ಸವಿಸ್ತಾರವಾಗಿ ವಿರಿಸಿದಳು. ನಾನು ಗಾಢವಾಗಿ ನನ್ನ ಪ್ರಿಯತಮನನ್ನು ನೆನೆಯಲಾರಂಭಿಸಿದೆ. ಹೆಣ್ಣಿನ ದೈಹಿಕ ಸಂಬಂಧ ನನಗೆ ಬೇಕೆಂದೆನಿಸಲಿಲ್ಲ... ಅಸಹ್ಯ ಎನಿಸಿತು.

ಇಂಗ್ಲೆಂಡ್‌ನಿಂದ ಬಂದು, ದೆಹಲಿಯಲ್ಲಿ ನೆಲಸಿರುವ ರಂಗಭೂಮಿಯ ಪ್ರಖ್ಯಾತ ನಿರ್ದೇಶಕ-ನನಗೂ ಪಾಠ ಹೇಳಿರುವ ಬ್ಯಾರಿಜಾನ್ ಒಬ್ಬಹೋಮೋ ಸೆಕ್ಯುಯಲ್ ಎಂದು ಕೇಳಿದ್ದೆ. ಹಾಗೆಯೇ ಸಿನಿಮಾ, ಟಿ.ವಿ. ತಾರೆ - ಅನಿತಾ ಕನ್ವರ್ ಹಾಗೂ ರಂಗತಜ್ಞೆ ರಿನಿ ಇಬ್ಬರೂ ಒಟ್ಟಿಗೆ ಬದುಕುವ ಲೆಸ್ಬಿಯನ್ಸ್ ಎಂಬುದನ್ನೂ ಬಲ್ಲೆ....ಇಂತಹ ಅನೇಕ ಜನರಿದ್ದಾರೆ. ಅವರಲ್ಲಿ ಅತ್ಯಂತ ಮಾನವೀಯ ಗುಣವುಳ್ಳವರೂ, ಕರುಣಾಮಯಿಗಳೂ ಇದ್ದಾರೆ ಎಂಬುದನ್ನು ನನ್ನ ಸ್ನೇಹಿತ ಸಿದ್ದಾರ್ಥ್ ಯಾವಾಗಲೂ ಹೇಳುತ್ತಿರುತ್ತಾರೆ. ಅಂತಹವರೊಂದಿಗೆ ಸಿದ್ದಾರ್ಥ್‌ಗೆ ಸ್ನೇಹವುಂಟು. ಅವರದೂ ಒಂದು ಜೀವನವಿಧಾನ ಎಂದು ಸಿದ್ದಾರ್ಥ್ ಹೇಳಿದರೂ, ಇವರೆಲ್ಲ ಪ್ರಕೃತಿನಿಯಮದ ವಿರುದ್ಧ ಏಕೆ ಹೋಗಬೇಕು? ಎಂಬುದು ನನ್ನ ಪ್ರಶ್ನೆ.

ಈಗಮತ್ತೆ ಆರತಿಯ ಬಗ್ಗೆ ನೋಡೋಣ. ಅಂದು ರಾತ್ರಿ ಆರತಿಯ ಮನೆಯಲ್ಲಿ ಊಟ ಮುಗಿಸಿ, ಮಾತು ಸಾಗುತ್ತಿದ್ದಂತೆಯೆ ಮಧ್ಯರಾತ್ರಿ ಕಳೆದಿತ್ತು, ನನ್ನ ಮನೆಗೆ ಹಿಂತಿರುಗುವುದು ಸಾಧ್ಯವಿರಲಿಲ್ಲ. ಆರತಿ ನನಗೆ ಡ್ರಾಯಿಂಗ್ ರೂಂನಲ್ಲಿ ಹಾಸಿಗೆ ಹಾಸಿಕೊಟ್ಟು, ಮಕ್ಕಳನ್ನು ಅಲ್ಲೇ ಮಲಗಿಸಿ, ಸಕೀನಾಳೊಂದಿಗೆ ತನ್ನ ಬೆಡ್‌ರೂಂಗೆ ತೆರಳಿ ಬಾಗಿಲು ಹಾಕಿಕೊಂಡಳು.

ಓ ತಾಯೆ ವರ್ಜೀನಿಯಾ

ಓ ತಾಯೆ ವರ್ಜೀನಿಯಾ
ಅರಸಿ ಅರಸಿ ಅರಸಿದೆ
ಹಲುಬಿದೆ
ಬೇಕು ನನ್ನದೇ ಕೋಣೆ
ಬೇಕು ನನ್ನದೇ ಕೋಣೆ
ಎಂದು
ಕೊನೆಗೂ ಸಿಕ್ಕಿತು ನನ್ನದೇ ಕೋಣೆ
ನಾನು ಕೂತಲ್ಲಿ ನಿಂತಲ್ಲಿ
ನಡೆಗಲಿತಲ್ಲಿ
ನುಡಿಗಲಿಯ ಬೇಕಾದ ಅನಿವಾರ್ಯದಲ್ಲಿ
ಮರಿಹಕ್ಕಿಗಳೆಲ್ಲ ಗುಟುಕು ಹಾಕಿಸಿಕೊಂಡು
ಹೊರ ಹೋದ ಮೌನದೇಕಾಂತದಲ್ಲಿ
ಊಟದ ಮೇಜಿನ ಮೇಲೆ
ಕುಕ್ಕರಿನ ಮೂರು ಸಿಳ್ಳೆಗಳ ನಡುವೆ
ಮಿಕ್ಸಿಯ ಗಿರ್ಗಟದನಡುವೆ
ಹುಟ್ಟಿದ ಶಬ್ದ ಪ್ರಳಯದ ಮೌನದಲ್ಲಿ

ಓ ತಾಯೆ ವರ್ಜೀನಿಯಾ
ನನ್ನ ಕವಿತೆ ಹುಟ್ಟುವುದು
ನಿಸ್ಸಂಗದಲ್ಲಿ ಕುದಿಸಿ
ಸಂಗದಲ್ಲಿ ಒಲವಿನರಳನರಳಿಸುವ
ತಳಮಳದಲ್ಲಿ
ಊಟದ ಮೇಜಿನ ಮೇಲೆ
ತಿಂಡಿಯಾದ ನಂತರದ
ನಿಶ್ಯಬ್ದ ಮಧ್ಯಾಹ್ನದಲ್ಲಿ
ಸಂಗದಲ್ಲಿ ಸಂತಸವಿದೆ
ನಿಸ್ಸಂಗದಲ್ಲಿ ಆನಂದವಿದೆ
ನಾನಿದ್ದಲ್ಲಿ ಇದೆ ನನ್ನದೇ ಒಳ ಓವರಿ

- ಸ. ಉಷಾ

CPMG/KA/BG-8/99

ಮಹಿಳಾ ದೌರ್ಜನ್ಯ - ಲಿಂಗ ತಾರತಮ್ಯ

ಭಾರತ ರಾಷ್ಟ್ರೀಯ ಕ್ರೈಮ್ ವರದಿಯ ಬ್ಯೂರೋ ಪ್ರಕಟಪಡಿಸಿರುವಂತೆ ಇಂದು ದೇಶದಲ್ಲಿ ಲೈಂಗಿಕ ಕಿರುಕುಳವು ಶೇಕಡ 40ರಷ್ಟು ಹೆಚ್ಚಿದ್ದರೆ, ವರದಕ್ಷಿಣೆ ಸಾವು ಸುಮಾರು ಶೇಕಡ 15.2ರಷ್ಟು ಹೆಚ್ಚಿದೆ.

1997ಕ್ಕೆ ಹೋಲಿಸಿದರೆ 1998ರಲ್ಲಿ ಹೆಣ್ಣುಗಳ ಮಾರಾಟವು ಸುಮಾರು ಶೇಕಡ 87.2ರಷ್ಟು ಏರಿರುವುದು ಸಮಸ್ಯೆ ಗಂಭೀರತೆಯನ್ನು ತೋರಿಸುತ್ತದೆಯಷ್ಟೇ ಅಲ್ಲದೆ ಇಂತಹ ಸಮಸ್ಯೆಗಳು ದೇಶವ್ಯಾಪಿ ಹಬ್ಬಿವೆ.

ಸುಮಾರು ಶೇಕಡ 40ರಷ್ಟು ಹೆಣ್ಣು ಮಕ್ಕಳು ಕಾನೂನು ಸಮ್ಮತಿಯ18 ವರ್ಷ ವಯೋಮಾನ ತಲುಪುವ ಮೊದಲೇ ಮದುವೆ ಮಾಡಲ್ಪಟ್ಟಿರುತ್ತಾರೆ. ಈ ಕಾರಣದಿಂದ ಮತ್ತು ಅಪೌಷ್ಟಿಕತೆಯೂ ಜೊತೆಗೆ ಸೇರಿದಂತೆ ತಾಯ್ತನದ ಸಾವುಗಳು ಹೆಚ್ಚಾಗುತ್ತಿವೆ. ಒಂದು ಲಕ್ಷ ಮಾತೆಯರಲ್ಲಿ 437 ಮಂದಿ ಇಂತಹ ಸಾವಿಗೆ ತುತ್ತಾಗುತ್ತಿದ್ದಾರೆ.

'ಲಿಂಗ ಸಮಾನತೆ, ಅಭಿವೃದ್ಧಿ ಮತ್ತು ಶಾಂತಿ'ಯನ್ನು ಕುರಿತಂತೆ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಭಾರತ ಮಂಡಿಸಿದ ವರದಿಯಂತೆ ''ಸ್ತ್ರೀ ಭ್ರೂಣಹತ್ಯೆಯು ಇಂದು ಸಮಾಜ ಎದುರಿಸುತ್ತಿರುವ ಲಿಂಗ ತಾರತಮ್ಯದ ಸ್ಪಷ್ಟ ಉದಾಹರಣೆಯಾಗಿದೆ. ಹುಟ್ಟುವ ನಾಲ್ಕು ಹೆಣ್ಣು ಮಕ್ಕಳಲ್ಲಿ ಒಂದು ಮಗು ತನ್ನ ಹದಿನೈದನೇ ಹುಟ್ಟು ಹಬ್ಬವನ್ನು ಕಾಣುವುದಿಲ್ಲ ಎನ್ನುವುದು ಎಲ್ಲರೂ ಗಂಭೀರವಾಗಿ ಯೋಚಿಸಬೇಕಾದ ವಿಷಯವಾಗಿದೆ. ಗಂಡು ಮಕ್ಕಳಿಗಿರುವ ಬಹುಬೇಡಿಕೆ ಲಿಂಗ ಪ್ರಮಾಣವನ್ನು ಏರುಪೇರು ಮಾಡುತ್ತದೆ. 1000 ಗಂಡಸರಿಗೆ 972 ಮಹಿಳೆಯರ ಪ್ರಮಾಣ ಇದ್ದದ್ದು 1000 ಗಂಡಸರಿಗೆ 927 ಮಹಿಳೆಯರ ಸಂಖ್ಯೆಯಾಗಿದೆ. 1997ರಲ್ಲಿ ಭಾರತ ಸರ್ಕಾರವು ಮಹಿಳೆಯರ ಸ್ಥಾನಮಾನವನ್ನು ಉತ್ತಮಪಡಿಸಲು ಸಂತಾನೋತ್ಪತ್ತಿ ಮತ್ತು ಶಿಶು ಕಲ್ಯಾಣವನ್ನು ಕುರಿತಂತೆ ಹಲವಾರು ಕಾರ್ಯಕ್ರಮಗಳನ್ನು ಯೋಜಿಸಿದ್ದರೂ ಸಂಪನ್ಮೂಲಗಳ, ವೈದ್ಯಕೀಯ ಸಾಮಗ್ರಿಗಳ ಕೊರತೆಯಿಂದಾಗಿ ಈ ದಿಕ್ಕಿನಲ್ಲಿ ಹೆಚ್ಚಿನ ಕೆಲಸವೇನೂ ನಡೆದಿಲ್ಲ.

ಈ ಅಂಕಿ ಸಂಖ್ಯೆಯ ದಾಖಲೆಯೆಲ್ಲವನ್ನೂ ಇತ್ತೀಚೆಗೆ ನ್ಯೂಯಾರ್ಕ್‌ನಲ್ಲಿ ನಡೆದ ವಿಶ್ವಸಂಸ್ಥೆಯ ಮಹಿಳಾ ಶೃಂಗಸಭೆಯಲ್ಲಿ ಭಾರತ ಸರ್ಕಾರವು ಮಂಡಿಸಿದ ಅಧಿಕೃತ ದಾಖಲೆಯಾಗಿದೆ. 1995ರಲ್ಲಿ ಬೀಜಿಂಗ್‌ನಲ್ಲಿ ನಡೆದ ಮಹಿಳಾ ಸಮ್ಮೇಳನದಲ್ಲಿ ಮಹಿಳಾ ಹಕ್ಕುಗಳಿಗಾಗಿಯೇ ಪ್ರತ್ಯೇಕ ಸಮಿತಿಯೊಂದನ್ನು ಭಾರತ ಸರ್ಕಾರ ಸ್ಥಾಪಿಸುವುದಾಗಿ ಒಪ್ಪಿಕೊಂಡಿತ್ತು, ಆದರೆ ಈ ದಿಕ್ಕಿನಲ್ಲಿ ಏನೂ ಕೆಲಸ ನಡೆದಿಲ್ಲ. ಅಷ್ಟೇ ಏಕೇ ಈಗಾಗಲೇ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಮಹಿಳಾ ಆಯೋಗವು ನೀಡಿರುವ ಸಲಹೆ ಸೂಚನೆಗಳು ದೂಳು ಹಿಡಿದಿವೆ.

"Achala" 108, Skyline Surabhi,
14-9, Vidyapeeta Road, BSK III Stage,
Bangalore - 560 085

To:
Smt/Sri

Book-Post/News Letter